ಬಂಟರ ಸಂಘ ಬೆಂಗಳೂರು
BUNTS' SANGHA BANGALORE
www.buntsanghablr.com

ಫೆಬ್ರವರಿ 2022 ಸಂಪುಟ 18
ಸಂಚಿಕೆ 02
ಸಂಚಿಕೆ ಬೆಲೆ ರೂ. 1/–

# ಸ್ನೇಹ ಚಿಂತನ

ಮಾಸ ಪತ್ರಿಕೆ



*Respectful wishes*
to Esteemed
Karnataka Lokayuktha (Rtd)
Hon'ble Justice
P. Vishwanath Shetty

ಅಭಿನಂದನೆಗಳು
ಗೌರವಾನ್ವಿತ
ಕರ್ನಾಟಕ ಲೋಕಾಯುಕ್ತ(ನಿವೃತ್ತ)ರಾದ
ಜಸ್ಟೀಸ್ ಪಿ. ವಿಶ್ವನಾಥ ಶೆಟ್ಟಿಯವರಿಗೆ
ಗೌರವಪೂರ್ಣ ನಮನಗಳು



324, Chord Road, Vijayanagara
Bengaluru - 560 040.
Ph: 080 2339 9323/ 2339 9635
E: info@buntsanghablr.com

# ಬಂಟರ ಸಂಘ ಬೆಂಗಳೂರು

## ಚುನಾವಣೆ : 2022-24



**ಸಮುದಾಯ ಬಾಂಧವರೇ**

ವೃತ್ತಿ ಜೀವನದಲ್ಲಿ ಸಾಧನೆಯ ಸಾರ್ಥಕ್ಯ ಕಂಡು, ಇದೀಗ ಸಮುದಾಯ ಸೇವೆಯ ಮೂಲಕ ಸಮಾಜ ಸೇವೆಯ ಸೇವಾಕಾಂಕ್ಷಿಯಾಗಿದ್ದೇನೆ.

ಮುಂಬರುವ ಬೆಂಗಳೂರು ಬಂಟರ ಸಂಘದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನದ ಸೇವಾಕಾಂಕ್ಷಿಯಾಗಿ ಬಂಟರ ಸಂಘದ ಮೂಲಕ ಸಮುದಾಯ ಸೇವೆಗೆ ಅವಕಾಶ ಮಾಡಿಕೊಡಬೇಕಾಗಿ ಸವಿನಯದ ಭಿನ್ನಹ.

ತಮ್ಮ ಹಾರೈಕೆ ಹಾಗೂ ಆಶೀರ್ವಾದದ ನಿರೀಕ್ಷೆಗಳೊಂದಿಗೆ,

ಇಂತಿ ನಿಮ್ಮವ

**ಕೆ. ರತ್ನಾಕರ ಹೆಗ್ಡೆ**

ನಿವೃತ್ತ ಎಕ್ಸಿಕ್ಯೂಟಿವ್ ಡೈರೆಕ್ಟರ್ - ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ

ನಿವೃತ್ತ ಜನರಲ್ ಮ್ಯಾನೇಜರ್ - ವಿಜಯಾ ಬ್ಯಾಂಕ್

ಮೊ : 99800 08239, 7019377060

**'ಸಮುದಾಯದ ಅಭಿವೃದ್ಧಿಗಾಗಿ ಸಮಗ್ರ ತಂಡದ ಆಯ್ಕೆ'**

ADVT.

# ಸ್ನೇಹ ಚಿಂತನೆ

*Monthly Magazine Published by*

**BUNTS' SANGHA BANGALORE**

**VOL. 18** **FEBRUARY 2022** **ISSUE 02**



**ಸಾಹಿತ್ಯ–ಪ್ರಕಾಶನ ಸಮಿತಿ**

ಚೇರ್‌ಪರ್ಸನ್ ಮತ್ತು ಗೌ॥ ಸಂಪಾದಕರು :
**ಶ್ರೀ ಎಂ. ಮುರಲೀಧರ ಹೆಗ್ಡೆ**

ಸಲಹಾ ಮಂಡಳಿ :
**ಶ್ರೀ ಎ. ಗಿರೀಶ್ ರೈ**
**ಶ್ರೀ ಸತ್ಯಾನಂದ ಮೇಲಾಂಟ ಎನ್.**
**ಶ್ರೀ ಪ್ರಕಾಶ್ ಶೆಟ್ಟಿ**

ಸಂಪಾದಕ ಮಂಡಳಿ :
**ಶ್ರೀಮತಿ ಸ್ಮಿತಾ ಬಲ್ಲಾಳ್**
**ಶ್ರೀಮತಿ ನಿರ್ಮಲಾ ಸಿ. ರೈ**
**ಡಾ॥ ಶಾಲ್ಮಲೀ ಸುರೇಶ್**
**ಶ್ರೀಮತಿ ಶ್ಯಾಮಲಾ ಶೆಟ್ಟಿ**
**ಶ್ರೀಮತಿ ಅನುಷಾ ಶೆಟ್ಟಿ**

ಪೋಷಕ ಸದಸ್ಯರು :
**ಶ್ರೀಮತಿ ಮನೋರಮ ಚೌಟ**
**ಶ್ರೀಮತಿ ವೇದ ಎಸ್. ಶೆಟ್ಟಿ**
**ಶ್ರೀ ಬಿ. ಕುಸುಮಾಕರ ಶೆಟ್ಟಿ**
**ಶ್ರೀ ಆರ್.ಎಸ್. ಶೆಟ್ಟಿ**
**ಶ್ರೀಮತಿ ವಸಂತಿ ಪಿ. ಶೆಟ್ಟಿ**
**ಶ್ರೀ ಪ್ರಕಾಶ್ ಶೆಟ್ಟಿ**
**ಶ್ರೀ ಎ.ಜೆ. ಶೆಟ್ಟಿ**
**ಶ್ರೀಮತಿ ಗೀತ ಭಗವಾನ್‌ದಾಸ್ ರೈ**
**ಶ್ರೀ ಕೆ. ಶಂಕರ್ ಶೆಟ್ಟಿ ಹುಬ್ಬಳ್ಳಿ**
**ಶ್ರೀ ಶ್ರೀನಿವಾಸ ಸೂಡ**

ಪ್ರಕಾಶಕರು :
**ಮಧುಕರ ಎಂ. ಶೆಟ್ಟಿ**


## ಒಳ ಪುಟಗಳಲ್ಲಿ...


| | | ಪುಟ |
|---|---|---|
| 1. | ಸಂಪಾದಕೀಯ | 2 |
| 2. | ಅಧ್ಯಕ್ಷರ ಮಾತು | 3 |
| 3. | ಗೌರವ ಕಾರ್ಯದರ್ಶಿಗಳ ವರದಿ | 4 |
| 4. | ಶಿವರಾತ್ರಿ ಶಕ್ತಿ ಸಮೃದ್ಧಿಯ ದಿನ | 5 |
| 5. | ಜನ ಸಮುದಾಯಕ್ಕೆ ಸಹಕಾರ ಸಂಘಗಳ ಕೊಡುಗೆ | 8 |
| 6. | ಮಂಗಳೂರಿನ ಮುಖ್ಯರಸ್ತೆಯೊಂದಕ್ಕೆ ಮುಲ್ಕಿ ಸುಂದರ್ ರಾಮ್ ಶೆಟ್ಟಿಯವರ ಹೆಸರು | 11 |
| 7. | A humorous incedent | 14 |
| 8. | Every life matters... | 15 |
| 9. | ಜಸ್ಟೀಸ್ ಪಿ. ವಿಶ್ವನಾಥ ಶೆಟ್ಟಿ, ಗೌರವಾನ್ವಿತ ಕರ್ನಾಟಕ ಲೋಕಾಯುಕ್ತರು (ನಿವೃತ್ತ) | 17 |
| 10. | Keeping "IBS" at Bay | 29 |
| 11. | ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರ – ಧಾರ್ಮಿಕ ಸೇವೆಗಳು | 31 |
| 12. | ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ – ಸಾಂಸ್ಕೃತಿಕ ಮತ್ತು ಕ್ರೀಡಾ ದಿನಾಚರಣೆ | 34 |
| 13. | ಸಮಾಜ ಸೇವಾ ಸಮಿತಿ – ಸೇವಾದಳ – "ಸೇವಾ ಚೇತನ–2 – 2022 | 35 |
| 14. | ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದ 22ನೇ ವಾರ್ಷಿಕೋತ್ಸವ | 38 |


**ಮುಖಪುಟ**

**ಗೌರವಾನ್ವಿತ ಕರ್ನಾಟಕ ಲೋಕಾಯುಕ್ತರಾಗಿ ಇತ್ತೀಚೆಗೆ ನಿವೃತ್ತರಾದ ಜಸ್ಟೀಸ್ ಪಿ. ವಿಶ್ವನಾಥ ಶೆಟ್ಟಿಯವರು**


ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ.

– ಸಂಪಾದಕ ಮಂಡಳಿ

# ಸಂಪಾದಕೀಯ



ಕಳೆದ ಜನವರಿ 27ರಂದು ಗೌರವಾನ್ವಿತ ಜಸ್ಟೀಸ್ ಪಿ. ವಿಶ್ವನಾಥ ಶೆಟ್ಟಿಯವರು ಕರ್ನಾಟಕ ಲೋಕಾಯುಕ್ತ ಹುದ್ದೆಯಲ್ಲಿ ಐದು ವರ್ಷಗಳ ಸೇವೆ ಸಲ್ಲಿಸಿ ನಿವೃತ್ತರಾದರು. "ಕರ್ನಾಟಕ ಲೋಕಾಯುಕ್ತ ಮುಖ್ಯಸ್ಥನಾಗಿ ನನ್ನ ಐದು ವರ್ಷಗಳ ಅವಧಿಯಲ್ಲಿ ಮಾಡಿದ ಕೆಲಸ ನನಗೆ ತೃಪ್ತಿ ತಂದಿದೆ" ಎಂದು ಅವರು ಹೇಳಿದ ಮಾತುಗಳು ನಮ್ಮೆಲ್ಲರಿಗೆ ಸ್ಫೂರ್ತಿ. ಲೋಕಾಯುಕ್ತ ಸಂಸ್ಥೆಗೆ ಇನ್ನೂ ಹೆಚ್ಚಿನ ಶಕ್ತಿ ಬರಲು ಶ್ರಮಿಸಿದವರು ಅವರು. ಅವರ ಹಾದಿಯಲ್ಲಿ ಅನೇಕ ಅಡ್ಡಿಗಳು ಬಂದರೂ ಎದೆಗುಂದದೇ ತನ್ನ ಕೆಲಸ ಕಾರ್ಯಗಳನ್ನು ಮುಂದುವರಿಸಿದರು. ಇದರಲ್ಲಿ ಕೋವಿಡ್ ಮಹಾಮಾರಿಯೂ ಪ್ರಮುಖ ಪಾತ್ರ ವಹಿಸಿತ್ತು. ಇನ್ನೂ ಅನೇಕ ವಿಚಾರಗಳನ್ನು ತಮ್ಮ ಮುಂದಿಡುವ ಉದ್ದೇಶದಿಂದ ಸ್ನೇಹ ಚಿಂತನೆಯ ಈ ಸಂಚಿಕೆಯಲ್ಲಿ ಜಸ್ಟೀಸ್ ಪಿ. ವಿಶ್ವನಾಥ ಶೆಟ್ಟಿಯವರ ಬಗ್ಗೆ ಒಂದು ಲೇಖನವನ್ನು ಪ್ರಸ್ತುತ ಪಡಿಸಲಾಗಿದೆ. ನಮ್ಮ ಬೆಂಗಳೂರು ಬಂಟರ ಸಂಘದ ಸರ್ವ ಸದಸ್ಯರ ಪರವಾಗಿ ನಾವು ಅವರಿಗೆ ಅತ್ಯಂತ ನಮ್ರತೆಯಿಂದ ನಮ್ಮ ಗೌರವವನ್ನು ಈ ಮೂಲಕ ಸಲ್ಲಿಸುತ್ತಿದ್ದೇವೆ.

ಇನ್ನು ಮುಂದಿನ ವಿಚಾರಕ್ಕೆ ಬರುವುದಾದರೆ ಎಲ್ಲರ ಮನಸ್ಸಲ್ಲೂ ಮುಂದೆ ನಾನು ಏನಾಗಬೇಕು? ಏನು ಮಾಡಬೇಕು ಎನ್ನುವ ಚಿಂತೆ, ಆಲೋಚನೆ ಇರುವುದು ಸಹಜ. 40–50 ವರ್ಷಗಳ ಹಿಂದೆ ಉತ್ತಮ ವಿದ್ಯಾಭ್ಯಾಸ ಮಾಡುವ ಹಂಬಲವಿದ್ದವರಿಗೆ ಕೆಲವೇ ಕೆಲವು ಅವಕಾಶಗಳಿದ್ದವು. ವೈದ್ಯ, ವಕೀಲ, ಆಡಿಟರ್, ಅಧ್ಯಾಪಕ ಹೀಗೆ ಕೆಲವು ಅವಕಾಶಗಳು ಮಾತ್ರ. ಆದರೆ ಈಗ ಅನೇಕ ಹೊಸ ಹೊಸ ಅವಕಾಶಗಳಿವೆ. ಅದರಂತೆ ಸಾವಿರಾರು ಕಾಲೇಜುಗಳು, ವಿಶ್ವವಿದ್ಯಾಲಯಗಳು ಬೇರೆ ಬೇರೆ ಕೋರ್ಸ್‌ಗಳನ್ನು ನಡೆಸುತ್ತವೆ. ಹಾಗೆಯೇ ಇದನ್ನು ಕಲಿತವರಿಗೆ ಮುಂದೆ ಉತ್ತಮವಾದ ಕೆಲಸ ಸಿಗುವುದಕ್ಕೆ ಅವಕಾಶ ಕೂಡಾ. ಇತ್ತೀಚೆಗೆ ವಿದೇಶಗಳಿಗೆ ಹೋಗಿ ಹೆಚ್ಚಿನ ವಿದ್ಯಾಭ್ಯಾಸ ಮಾಡುವುದಂತೂ ಸಾಮಾನ್ಯವಾಗಿದೆ.

ಹಿಂದೆ ನಡೆದ ಒಂದು ಘಟನೆ. ಇತ್ತೀಚೆಗೆ ಮರಣೋತ್ತರವಾಗಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಪ್ರೊ. ಡಾ. ಸಿದ್ದಲಿಂಗಯ್ಯನವರು ಹೇಳಿದ ಮಾತು. ಅವರು ಒಮ್ಮೆ ಒಂದು ಹಳ್ಳಿಗೆ ಕೆಲಸದ ನಿಮಿತ್ತ ಹೋಗಿದ್ದರು. ಕೆಲಸ ಮುಗಿಸಿ ವಾಪಾಸು ಬರಬೇಕಾದರೆ ಬಸ್ಸಿಗೋಸ್ಕರ ಒಂದು ಜಾಗದಲ್ಲಿ ಕಾಯುತ್ತಾ ಇದ್ದರು. ಅದು ಹಳ್ಳಿ, ಅಲ್ಲೇ ಒಂದು ಚಿಕ್ಕ ಸರ್ಕಾರಿ ಶಾಲೆ, ಆವರಣದಲ್ಲಿ ಮರಗಳು, ಅಲ್ಲೇ ಒಂದು ಕಟ್ಟೆ–ಈ ಸುಂದರವಾದ ತಾಣವೇ ಬಸ್ಸಿಗೆ ಕಾಯುವ ಜಾಗ. ಅಲ್ಲೇ ಪಕ್ಕದಲ್ಲಿದ್ದ ಆಟದ ಮೈದಾನದಲ್ಲಿ ಒಂದಿಷ್ಟು ಮಕ್ಕಳು ಆಟವಾಡುತ್ತಿದ್ದರು. ಹೇಗೂ ಸ್ವಲ್ಪ ಸಮಯ ಇದೆ, ಮಕ್ಕಳನ್ನು ಮಾತಾಡಿಸೋಣ ಎಂದು ಯೋಚಿಸಿದ ಸಿದ್ದಲಿಂಗಯ್ಯನವರು ಮಕ್ಕಳನ್ನು ಹತ್ತಿರಕ್ಕೆ ಕರೆದು, ಅವರಲ್ಲಿ ಒಂದು ಪ್ರಶ್ನೆ ಇಡುತ್ತಾರೆ –ಮುಂದೆ ನೀವು ಕಲಿತು ಏನಾಗಬೇಕು ಎಂತಿದ್ದೀರಿ? ಅದಕ್ಕೆ ತುಂಬಾ ಸ್ವಾರಸ್ಯಕರವಾದ ಉತ್ತರ ಮುಗ್ಧ ಮಕ್ಕಳಿಂದ ಬರುತ್ತದೆ–ನಾನು ಪೊಲೀಸ್ ಆಗುತ್ತೇನೆ, ನಾನು ಕಂಡೆಕ್ಟರ್ ಆಗುತ್ತೇನೆ ಹೀಗೆ ಎಲ್ಲಾ ಮಕ್ಕಳ ಉತ್ತರವೂ ಇದೇ ಎರಡು. ಏಕೆ ಎಂದು ಕೇಳಿದಾಗ ಪುಟ್ಟ ಮಕ್ಕಳ ಮನಸ್ಸಿನಿಂದ ಬಂದ ಉತ್ತರ, ಅಷ್ಟು ದೊಡ್ಡ ಬಸ್ಸು, ಜನ ತುಂಬಿದ್ದರೂ ಕಂಡೆಕ್ಟರ್ "ರೈಟ್" ಹೇಳದಿದ್ದರೆ ಬಸ್ಸೇ ಮುಂದೆ ಹೋಗಲ್ಲ. ಹಾಗೆಯೇ ಒಬ್ಬ ಪೊಲೀಸ್ ಕೈಯಲ್ಲಿ ಕೋಲು ಹಿಡಿದುಕೊಂಡು ಬಂದರೆ ಎಲ್ಲರೂ ಹೆದರುತ್ತಾರೆ. ನೋಡಿ ಇವರಿಬ್ಬರಿಗೆ ಎಷ್ಟು ಪವರ್ ಇದೆ ಅಂತ. ಮುಂದೆ ಸಿದ್ದಲಿಂಗಯ್ಯನವರು ಹೇಳುತ್ತಾರೆ–ಇದೇ ಅಲ್ಲಿನ ಹಳ್ಳಿಯ ಮಕ್ಕಳಿಗಿರುವ ಸಾಮಾನ್ಯ ಜ್ಞಾನ. ಅವರು ಹೆಚ್ಚಿನದ್ದೇನು ನೋಡಿರಲ್ಲ. ನಗರ ಪ್ರದೇಶಗಳಲ್ಲಿನ ಸವಲತ್ತು ಅವರಿಗಿಲ್ಲ. ಆದ್ದರಿಂದ ಅವರು ಬಾವಿಯೊಳಗಿನ ಕಪ್ಪೆಗಳಾಗಿದ್ದಾರೆ.

ಆದರೆ ನಮಗೆ ಇರುವ ಸಾವಿರಾರು ಅವಕಾಶಗಳನ್ನು ನೋಡಿದರೆ ಅದಕ್ಕೆ ಮಿತಿಯೇ ಇಲ್ಲ. ಇದನ್ನು ಸಾಧಿಸುವುದು ನಮ್ಮ ಕೈಯಲ್ಲಿದೆ ಅಷ್ಟೇ. ಸ್ವಾಮಿ ವಿವೇಕಾನಂದರು ಹೇಳಿದಂತೆ "ನಿನ್ನ ಬಾಳಿನ ಶಿಲ್ಪಿ ನೀನೇ". ನಮ್ಮಲ್ಲಿ ಸಾಧಿಸಬೇಕೆಂಬ ಹಂಬಲ, ಛಲ, ಓದುವ ಅಭ್ಯಾಸ, ಉತ್ತಮ ನಡತೆ, ಹಿರಿಯರಿಗೆ ಗೌರವ ಕೊಡುವುದು, ಮೋಸದ ಜೀವನ ನಡೆಸಬಾರದೆಂಬ ತಿಳುವಳಿಕೆ ಇತ್ಯಾದಿಗಳಿದ್ದಲ್ಲಿ ನಾವು ಏನನ್ನೂ ಬೇಕಾದರೂ ಸಾಧಿಸಲು ಸಾಧ್ಯ. ಇಂತಹ ಅವಶ್ಯಕ ವಿಷಯಗಳನ್ನು ನಾವು ಬೆಳೆಯುವ ಮಕ್ಕಳಿಗೆ, ಮುಂದಿನ ಪೀಳಿಗೆಗೆ ತಿಳಿಸುವಂತಾಗಬೇಕು.

**ಎಂ. ಮುರಲೀಧರ ಹೆಗ್ಡೆ**
**hegdemm@gmail.com**

# ಅಧ್ಯಕ್ಷರ ಮಾತು



ಸದಸ್ಯ ಬಾಂಧವರೇ,

ಕಳೆದ ಐದು ವರ್ಷಗಳಿಂದ ಕರ್ನಾಟಕದ ಲೋಕಾಯುಕ್ತರಾಗಿ ದಕ್ಷತೆಯಿಂದ ಕಾರ್ಯನಿರ್ವಹಿಸಿ ಇದೀಗ ಹುದ್ದೆಯಿಂದ ನಿವೃತ್ತರಾದ ಜಸ್ಟೀಸ್ ಪಿ. ವಿಶ್ವನಾಥ್ ಶೆಟ್ಟಿಯವರಿಗೆ ಈ ಸಂಚಿಕೆಯನ್ನು ಅರ್ಪಿಸುತ್ತಿದ್ದೇವೆ. ಲೋಕಾಯುಕ್ತ ಹುದ್ದೆಗೆ ತನ್ನದೇ ಆದ ಘನತೆ-ಗೌರವವಿದೆ. ಅಧಿಕಾರಾವಧಿಯಲ್ಲಿ ತನ್ನ ಮುಂದಿರುವ ಎಲ್ಲಾ ಸವಾಲುಗಳನ್ನು ಸಮರ್ಥವಾಗಿ ಎದುರಿಸಿ ನಿಷ್ಪಕ್ಷಪಾತವಾಗಿ ಹಾಗೂ ಪ್ರಾಮಾಣಿಕವಾಗಿ ಕಾರ್ಯಪ್ರವೃತ್ತರಾಗಿ ಲೋಕಾಯುಕ್ತ ಸ್ಥಾನಕ್ಕೆ ಗೌರವವನ್ನು ತಂದುಕೊಟ್ಟವರು ಜಸ್ಟೀಸ್ ಶೆಟ್ಟಿಯವರು. ನ್ಯಾಯವಾದಿಯಾಗಿ, ನ್ಯಾಯಾಧೀಶರಾಗಿ ಆಡಳಿತ ಹಾಗೂ ಕಾನೂನು ವಿಚಾರಗಳಲ್ಲಿ ಅವರು ಗಳಿಸಿದ ಅನುಭವದಿಂದ ಲೋಕಾಯುಕ್ತ ಹುದ್ದೆಯನ್ನು ಸಮರ್ಥವಾಗಿ ಮುನ್ನಡೆಸಲು ಸಾಧ್ಯವಾಗಿದೆ. ನಮ್ಮ ಸಂಘದ ಗೌರವ ಕಾರ್ಯದರ್ಶಿಯಾಗಿಯೂ, ಕಾನೂನು ವಿಷಯಗಳಲ್ಲಿ ಮಾರ್ಗದರ್ಶನ ಮಾಡುವ ಮೂಲಕ ಸಂಘವನ್ನು ಮುನ್ನಡೆಸಿದ್ದಾರೆ. ಬಂಟರ ಸಂಘವು ಯಲಚಗುಪ್ಪೆಯಲ್ಲಿ ಖರೀದಿಸಿರುವ ಜಮೀನಿನಲ್ಲಿ ಶೈಕ್ಷಣಿಕ ಸಂಕೀರ್ಣ ನಿರ್ಮಿಸಲು ಅಗತ್ಯ ಮಾರ್ಗದರ್ಶನ ನೀಡಿರುವ ಜಸ್ಟೀಸ್ ವಿಶ್ವನಾಥ ಶೆಟ್ಟಿಯವರಿಗೆ ಮತ್ತೊಮ್ಮೆ ಬಂಟ ಸಮುದಾಯದ ಸರ್ವ ಸದಸ್ಯರ ಪರವಾಗಿ ಹೃದಯಪೂರ್ವಕ ಅಭಿನಂದನೆಗಳು.

ಈ ಬಾರಿ ಸಂಘದ ವರಸಿದ್ಧಿ ವಿನಾಯಕ ಮಂದಿರದ ವಾರ್ಷಿಕೋತ್ಸವವನ್ನು ಕೋವಿಡ್ ನಿಯಮಾವಳಿಗನುಸಾರವಾಗಿ ಆಚರಿಸಲಾಗಿದೆ. ನಮ್ಮ ಕರಾವಳಿಯಲ್ಲಿ ಸಲ್ಲಿಸಲಾಗುವ ವಿಶೇಷ ಸೇವೆಗಳನ್ನು ಸಹ ವಿನಾಯಕ ಮಂದಿರದಲ್ಲಿ ಹಮ್ಮಿಕೊಳ್ಳುವ ನಿಟ್ಟಿನಲ್ಲಿ ಚಿಂತನೆ ನಡೆಸಲಾಗಿದೆ. ವಿನಾಯಕನಿಗೆ ಸಲ್ಲಿಸಲಾಗುವ ಸೇವೆಗಳಲ್ಲಿ ಬಹು ಪ್ರಮುಖವಾದ ಮೂಡುಗಣಪತಿ ಹಾಗೂ ಮೂಡಪ್ಪ ಸೇವೆ (ಉದಯಾಸ್ತಮಾನ ಸೇವೆ) ಯನ್ನು ಪ್ರಾರಂಭಿಸಲಾಗಿದೆ. ಈ ಬಗ್ಗೆ ಹೆಚ್ಚಿನ ವಿವರಗಳನ್ನು ಈ ಸಂಚಿಕೆಯಲ್ಲಿ ಪ್ರಕಟಿಸಲಾಗಿದ್ದು, ಸೇವೆಗಳನ್ನು ಸಲ್ಲಿಸುವ ಭಕ್ತಾದಿಗಳು ಮಂದಿರ ಅಥವಾ ಸಂಘದ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಕೊರೋನಾ ಸೋಂಕು ಒಂದು ಹಂತಕ್ಕೆ ಹತೋಟಿಗೆ ಬರುತ್ತಿದ್ದು, ಶಾಲಾ ಕಾಲೇಜುಗಳು ಮತ್ತೆ ಆರಂಭಗೊಂಡು ಶೈಕ್ಷಣಿಕ ಚಟುವಟಿಕೆಗಳು ಮತ್ತಷ್ಟು ಚುರುಸುಗೊಂಡಿವೆ. ದಿನಾಂಕ 26.01.2022 ರಂದು ನಡೆಯಬೇಕಿದ್ದ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆಯನ್ನು ಕೋವಿಡ್ ನಿಯಮಾವಳಿಗನುಗುಣವಾಗಿ ಮುಂದೂಡಲಾಗಿದ್ದು, ಮುಂದಿನ ದಿನಾಂಕವನ್ನು ಶೀಘ್ರವಾಗಿ ತಿಳಿಸಲಾಗುವುದು.

ಬಂಟರ ಸಂಘದ ವತಿಯಿಂದ ಮದುವೆ ಸಮಾರಂಭಗಳಿಗೆ ವಿಶೇಷ ಉಡುಪುಗಳನ್ನು ಕೊಳ್ಳಲು ಆರ್ಥಿಕವಾಗಿ ತೀರಾ ಹಿಂದುಳಿದ ಜನಸಾಮಾನ್ಯರ ನೆರವಿಗೆ 'ಕ್ಲಾತ್ ಬ್ಯಾಂಕ್' ಪ್ರಾರಂಭಿಸುವ ಬಗ್ಗೆ ಈಗಾಗಲೇ ಕಾರ್ಯಪ್ರವೃತ್ತರಾಗಿದ್ದು, ಈ ಯೋಜನೆ ಯಶಸ್ವಿಯಾಗಲು ತಮ್ಮ ಸಹಕಾರ ಕೋರುತ್ತಿದ್ದೇವೆ. ಈ ಬಗ್ಗೆ ಹೆಚ್ಚಿನ ವಿವರಗಳನ್ನು ಈ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ.

ವಂದನೆಗಳೊಂದಿಗೆ,

**ಆರ್. ಉಪೇಂದ್ರ ಶೆಟ್ಟಿ**
ಅಧ್ಯಕ್ಷರು

# ಗೌರವ ಕಾರ್ಯದರ್ಶಿಗಳ ವರದಿ



**ಓಂ ಗುರುಭ್ಯೋ ನಮಃ**


ಪ್ರತೀ ವರ್ಷದಂತೆ ಜನವರಿ 26ರಂದು ನಡೆಯುವ ಶ್ರೀಮತಿ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ಸಾಂಸ್ಕೃತಿಕ ಮತ್ತು ಕ್ರೀಡಾ ದಿನಾಚರಣೆಯನ್ನು ಕೋವಿಡ್‌ನಿಂದಾಗಿ ನಡೆಸಲು ಸಾಧ್ಯವಾಗಲಿಲ್ಲ ಎನ್ನುವುದು ಬಹಳ ಬೇಸರದ ಸಂಗತಿ. ಅಂದು ಭಂಡಾರಿಯವರು ಉದಾರವಾಗಿ ನೀಡಿದ ಮೂರು ಎಕರೆ ಜಾಗದಿಂದ ಇಂದು ಬೆಂಗಳೂರು ಬಂಟರ ಸಂಘವು ವಿವಿಧ ನೆಲೆಗಳಲ್ಲಿ ಅಂದರೆ ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ, ಸಂಕಷ್ಟದಲ್ಲಿರುವ ಸಮಾಜದ ಜನರಿಗೆ ಸಹಾಯ ಹಸ್ತ ನೀಡಲು ಅನುಕೂಲವಾಗಿದೆ. ಇವರ ಹೃದಯ ಶ್ರೀಮಂತಿಕೆಯಿಂದಾಗಿ ಲಕ್ಷೋಪಲಕ್ಷ ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆಯಾಗಿದೆ. ಸುಮಾರು 300ಕ್ಕೂ ಅಧಿಕ ಸಿಬ್ಬಂದಿಗಳಿಗೆ ಉದ್ಯೋಗ ದೊರೆತು, ಅವರ ಕುಟುಂಬ, ಬಂಟರ ಸಂಘ ಶ್ರೀಮತಿ ಭಂಡಾರಿಯವರ ಕುಟುಂಬಕ್ಕೆ ಚಿರಋಣಿಯಾಗಿದೆ. ನಿರಂತರವಾಗಿ ಸಮುದಾಯದ ಸದಸ್ಯರಿಗೆ ಹಲವು ಸ್ತರಗಳಲ್ಲಿ ಉತ್ತೇಜನ ಹಾಗೂ ನೆರವು ನೀಡುತ್ತಾ ಬಂದಿರುವುದಕ್ಕೆ ಮುಖ್ಯ ಕಾರಣ ಶ್ರೀಮತಿ ರಾಧಾಬಾಯಿ ತಿಮ್ಮಪ್ಪ ಭಂಡಾರಿಯವರ ಕೊಡುಗೆ. ಇವರಿಗೊಂದು ಹೃದ್ಯ ನಮನಗಳು. ಜನವರಿ 26ರಂದು ಕಾರ್ಯಕ್ರಮ ಮಾಡಲಾಗದಿದ್ದರೂ ಇವರ ಹಾಗೂ ದಾನಿಗಳ ಪ್ರತಿಮೆಗೆ ಪುಷ್ಪ ಹಾರಾರ್ಪಣೆ ಮಾಡಿ ಗೌರವದ ಪ್ರೀತಿ, ಆದರಗಳನ್ನು ಪುಷ್ಪದೊಂದಿಗೆ ಅವರ ಪಾದದಡಿಯಲ್ಲಿ ಅರ್ಪಿಸಲಾಯಿತು.

ಶ್ರೀಮತಿ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ಸಾಂಸ್ಕೃತಿಕ ಮತ್ತು ಕ್ರೀಡಾ ದಿನಾಚರಣೆಯ ಪ್ರಯುಕ್ತ ಕಾರ್ಯಕ್ರಮ ನಿಲ್ಲಿಸಬಾರದೆಂಬ ಯೋಚನೆಯೊಂದಿಗೆ ಸಾಂಸ್ಕೃತಿಕ ಸಮಿತಿಯ ಚೇರ್‌ಪರ್ಸನ್ ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿಯವರು, ಸಂಚಾಲಕರಾದ ಶ್ರೀ ಪಿ. ಪ್ರಸಾದ್ ಶೆಟ್ಟಿಯವರು ಮತ್ತು ಸದಸ್ಯರು ಸಾಂಸ್ಕೃತಿಕ ಸ್ಪರ್ಧೆಯನ್ನು ಬಹಳ ಸುಂದರವಾಗಿ ನಡೆಸಿಕೊಟ್ಟರು. ಈ ಸ್ಪರ್ಧೆಯಲ್ಲಿ ಗೌರವಾನ್ವಿತ ಸದಸ್ಯರು ಹಾಗೂ ಅವರ ಮಕ್ಕಳು ಭಾಗವಹಿಸಿರುವುದು ಹೆಮ್ಮೆಯ ವಿಷಯ. ಅವರೆಲ್ಲರಿಗೂ ಸಂಘದ ಆಡಳಿತ ಮಂಡಳಿಯ ಪರವಾಗಿ ಹೃದಯ ಸ್ಪರ್ಶಿ ಅಭಿನಂದನೆಗಳು. ವಿಜೇತರಿಗೆ ಪ್ರೋತ್ಸಾಹ ಹಾಗೂ ಪುರಸ್ಕಾರಗಳನ್ನು ಸದ್ಯದಲ್ಲೇ ಸಂಘದಿಂದ ವಿತರಿಸಲಾಗುವುದು.

ಶ್ರೀ ವರಸಿದ್ಧಿ ವಿನಾಯಕ ಮಂದಿರದ ವಾರ್ಷಿಕೋತ್ಸವವನ್ನು ದಿನಾಂಕ 19.01.2022ರಂದು ಸರಕಾರದ ಕಟ್ಟುಪಾಡಿನೊಂದಿಗೆ ಬಹಳ ಗೌರವದಿಂದ ಶುದ್ಧ ಭಕ್ತರ ಮಿಲನದೊಂದಿಗೆ ನಡೆಸಿಕೊಟ್ಟ ಚೇರ್‌ಪರ್ಸನ್ ಶ್ರೀ ರಾಜೇಶ್ ಶೆಟ್ಟಿ ಕುತ್ಯಾರು, ಸಂಚಾಲಕರಾದ ಶ್ರೀ ಉಮೇಶ್ ಕುಮಾರ್ ಶೆಟ್ಟಿ ಹಾಗೂ ಅವರ ತಂಡಕ್ಕೆ ಧನ್ಯವಾದಗಳು. ಪ್ರಸಾದ ಸೇವೆ, ಮೂಡುಗಣಪತಿ ಸೇವೆ ಹಾಗೂ ಇನ್ನಿತರ ಸೇವೆ ಹಾಗೂ ಸಹಕಾರ ನೀಡಿದ ದಾನಿಗಳಿಗೆ ಕೃತಜ್ಞತೆಗಳು. ಹಿರಿಯ ಸದಸ್ಯರು, ದಾನಿಗಳು ಆದ ಶ್ರೀ ಇರ್ಮಾಡಿ ಜಯಪ್ರಸಾದ್ ಶೆಟ್ಟಿ ಮತ್ತು ಅವರ ಧರ್ಮಪತ್ನಿ ಶ್ರೀಮತಿ ಸುಜಯ ಜೆ. ಶೆಟ್ಟಿಯವರು ನಿರಂತರವಾಗಿ ನೀಡಿದ ಸೇವೆಗಳಿಗೆ ಸಂಘ ಆಭಾರಿಯಾಗಿದೆ.

**ಮಧುಕರ ಎಂ. ಶೆಟ್ಟಿ**
ಗೌರವ ಕಾರ್ಯದರ್ಶಿ

# ಶಿವರಾತ್ರಿ ಶಕ್ತಿ ಸಮೃದ್ಧಿಯ ದಿನ



ಅತ್ರಾಡಿ
ಭೋಜರಾಜ ಹೆಗ್ಡೆ

ಭಾರತೀಯರಾದ ನಾವು ಅತ್ಯಂತ ಶ್ರದ್ಧಾಭಕ್ತಿಯಿಂದಾಚರಿಸುವ ಮಹಾಶಿವರಾತ್ರಿಯ ಆಧ್ಯಾತ್ಮಕ ಹಿನ್ನಲೆ ಅರಿತುಕೊಳ್ಳದೇ ಹೋದರೆ, ಮಾನವ ಇತಿಹಾಸದಲ್ಲಿ ಅತ್ಯಂತ ಪ್ರಮುಖ ಘಟನೆಯೊಂದು ಅರಿವಿಲ್ಲದೆ ಕೊನೆಗೆ ಪಶ್ಚಾತ್ತಾಪ ಪಡಬೇಕಾಗುತ್ತದೆ. ಅಜ್ಞಾನವೆಂಬ ಅಂಧಕಾರ ಸಮಾಪ್ತಿಯ ಪ್ರತಿಕಾರವೇ ಶಿವರಾತ್ರಿ. ಮನುಷ್ಯ ಜನ್ಮ ಸಾಫಲ್ಯ ಕೇವಲ ಧರ್ಮಸಾಧನಮ್ ಎಂಬಂತೆ ನಮ್ಮ ಸಫಲತೆಯನ್ನು ಪಡೆಯುವುದು ಧರ್ಮ ಸಾಧನೆಯಿಂದ ಅರ್ಥಾತ್ ಧರ್ಮದ ಮರ್ಮವನ್ನು ತಿಳಿದು ಜೀವನದಲ್ಲಿ ಆಚರಣೆಯಲ್ಲಿ ತಂದುಕೊಂಡು ಬಾಳಬೇಕು, ಬದುಕಬೇಕು. ಪ್ರಜ್ಞಾಶಕ್ತಿ ಸರಿ ಇದ್ದರೆ ಮಾತ್ರ ಮನುಷ್ಯ ಮಾನವೀಯ ಧರ್ಮದೊಂದಿಗೆ ಬದುಕು ಬಾಳಲು ಸಾಧ್ಯ. ಪ್ರಪಂಚದಲ್ಲೇ ಧರ್ಮದ ಬೆನ್ನೆಲುಬು ಎಂದೆಣಿಸಲ್ಪಟ್ಟ ನಮ್ಮ ಈ ಭವ್ಯ ಭಾರತ ನಮ್ಮ ಹಬ್ಬಗಳ ವೈವಿಧ್ಯಮಯ ಆದರ್ಶನೀಯ, ಸದಾ ಅನುಕರಣೀಯ ಮತ್ತು ಸಾಫಲ್ಯಮಯವಾದದ್ದು. ಇವುಗಳ ಆಚರಣೆಯಲ್ಲಿ ಆಚಾರ, ವಿಚಾರ, ಸುಖ, ಸಂತೋಷವೂ ಕಂಡು ಬರುತ್ತದೆ. ಮಾತ್ರವಲ್ಲದೆ ಶಾಸ್ತ್ರೋಕ್ತವೂ ವೈಜ್ಞಾನಿಕವೂ ಆಗಿದೆ.

ಶಿವರಾತ್ರಿಯಂದು ಉಪವಾಸ, ವ್ರತ, ಜಾಗರಣೆ, ಧ್ಯಾನದಿಂದ ಮೋಕ್ಷ ಪ್ರಾಪ್ತಿ. ಶಿವ ಅಂದರೆ, ಸರ್ವ ದೇವ, ದಾನವ, ಮಾನವರಿಂದ ಪೂಜಿಸಲ್ಪಡುವ ಪರಮಾತ್ಮ, ನಿರಾಕಾರ, ಜ್ಯೋತಿರ್ಬಿಂದು ಸ್ವರೂಪದ ಮೃತ್ಯುಂಜಯ. ವಿಶ್ವದ ಈ ಭೂಮಿಯ ಮತ್ತು ವೇದಗಳ ಗರ್ಭಾಶಯನು ಮತ್ತು ಸರ್ವ ಆತ್ಮದ ಪ್ರಭು ಶಿವ ಎಂದರ್ಥ. ಶಂಕರ ಅಂದರೆ ಒಳ್ಳೆಯದು, ಕರ ಅಂದರೆ ಮಾಡುವವನು ಎಂದರ್ಥ. ಶಿವ ಅಂದರೆ ಸದಾ ಕಲ್ಯಾಣಕಾರಿ, ಮಂಗಳಕಾರಿ, ಶುಭಕಾರಿ ಎಂದರ್ಥ. ದೇಹವೇ ದೇವಾಲಯ, ಜೀವೋ ದೇವ ಸದಾಶಿವ ಎಂಬ ಮಾತು ವೇದಗಳಲ್ಲೂ ಬರುತ್ತದೆ. ನಮ್ಮ ಈ ದೇಹವೆಂಬ ಮನೆಯಲ್ಲಿ ದೇವರು ನೆಲೆಸಬೇಕಲ್ಲದೆ, ದೆವ್ವಗಳು ನೆಲೆಸಬಾರದು. ಭಕ್ತ, ಭಗವಂತನ ನಡುವೆ, ಹರ ಮತ್ತು ನರನ ನಡುವೆ, ನರ ನಾರಾಯಣರ ನಡುವೆ ಪವಿತ್ರ ಪ್ರೇಮ, ನಿರ್ಮಲ ಪ್ರೀತಿ ಪ್ರಕಟಗೊಳ್ಳುತ್ತದೆ. ಓಂ. ನಮಃ ಶಿವಾಯ ಮಂತ್ರವು ಓಂಕಾರದಿಂದ ಪ್ರಾರಂಭವಾಗುತ್ತದೆ. 'ಓಂ' ಅನ್ನುವುದು ಮಹಾ ಬೀಜಾಕ್ಷರ. ಅದನ್ನೇ ಮತ್ತೆ ಮತ್ತೆ ಉಚ್ಚರಿಸುವುದರಿಂದ ಮಾನವನಲ್ಲಿ ತುಂಬಿರುವ ತಮೋಗುಣ, ರಜೋಗುಣಗಳೆರಡೂ ದೂರವಾಗಿ ಶಿವಭಕ್ತರಲ್ಲಿ ಶಿವಾಂಶ ಭಾವ ಸೇರಿಕೊಂಡಾಗ ಭಗದ್ಭಾವ ಜಾಗೃತವಾದಾಗ, ಅವರಲ್ಲಿ ತುಂಬಿರುವ ಅಹಂ, ಮಮಕಾರ, ದುಶ್ಚಿಂತೆಗಳೆಲ್ಲ ದೂರವಾಗಿ, ಸದ್ಭಾವನೆಯ ಆಧ್ಯಾತ್ಮಿಕ, ಧಾರ್ಮಿಕ ಸತ್ ಚಿಂತನೆಯ, ಸತ್ಕಾರ್ಯಗಳ ಸತ್ಪ್ರೇರಣೆಯಾಗುತ್ತಿರುತ್ತದೆ. ಶಿವಾರಾಧನೆ ವೇದಗಳ ಕಾಲದಿಂದಲೂ ರೂಢಿಯಲ್ಲಿತ್ತು. ಒಂದು ದಿನದ ಶಿವರಾತ್ರಿಯ ವ್ರತ, ಉಪವಾಸ, ಜಾಗರಣೆಗಳನ್ನು ಆಚರಿಸಿದರೆ ಸಾವಿರ ಏಕಾದಶೀ ವ್ರತಗಳನ್ನು ಆಚರಿಸಿದ ಪುಣ್ಯ ದೊರಕುತ್ತದೆ. ಅಲ್ಲದೆ ಮದುವೆಯಾಗದ ಹೆಣ್ಣು ಮಕ್ಕಳು ಅನುರೂಪದ ಪತಿಗಾಗಿ ಪ್ರಾರ್ಥಿಸಿದರೆ, ಮುತ್ತೈದೆಯರು ಪತಿಯ ಶ್ರೇಯೋಭಿವೃದ್ಧಿಗಾಗಿ ಪ್ರಾರ್ಥಿಸುವುದು ಸಂಪ್ರದಾಯ. ಶಿವಲಿಂಗದಿಂದ ಸತತ ತೇಜಸ್ಸು ಮತ್ತು ಶಕ್ತಿ ಹೊರ ಬೀಳುವುದರಿಂದ ಉಷ್ಣತೆಯನ್ನು ನಿಯಂತ್ರಿಸಲು ಲಿಂಗದ ಮೇಲೆ ಧಾರಾ ಪಾತ್ರೆಯನ್ನಿಟ್ಟು ನೀರು ತುಂಬಿಸುತ್ತಾರೆ. ಅದಕ್ಕೆ ಶಿವ ಅಭಿಷೇಕ ಪ್ರಿಯ ಎನ್ನುವುದು. ಶಿವನಿಗೆ ಬಿಲ್ವಪತ್ರೆ, ಎಕ್ಕಮಾಲೆ, ತುಂಬೆ ಹೂಗಳು ಬಲು ಇಷ್ಟ. ಬಿಲ್ವಪತ್ರೆಯ ಮೂರು ದಳಗಳಲ್ಲಿ ಸತ್ವ, ರಜಸ್ಸು, ತಮಸ್ಸುಗಳೆಂಬ ಮೂರು ಗುಣಗಳಿವೆ. ಹಾಗೆ ಶಿವನ ತ್ರಿಶೂಲವೆಂಬ ತ್ರಿದಳದ ಆಭರಣ ಶಿವಲಿಂಗದ ಪಕ್ಕದಲ್ಲೇ ಇರುತ್ತದೆ.

'GOD' ಎಂಬ ಪದವು ಪರಮಾತ್ಮನ ಮೂರು ಕರ್ತವ್ಯಗಳ ಕುರುಹನ್ನೇ ತೋರಿಸುತ್ತದೆ. G ಅಂದರೆ Generation ಅಂದರೆ ಸ್ಥಾಪನೆಯನ್ನು, O ಅಂದರೆ Operation ಅಂದರೆ ಪಾಲನೆಯನ್ನು, D ಅಂದರೆ Destruction, ಅಂದರೆ ವಿನಾಶವನ್ನು ಅರ್ಥಾತ್ ಸ್ಥಾಪನೆ, ಪಾಲನೆ, ವಿನಾಶಗಳನ್ನು ಪರಮಾತ್ಮನೇ ಮಾಡುವುದರಿಂದ GOD ಎಂದು ಸ್ಮರಿಸಲಾಗುತ್ತದೆ. ನಮ್ಮ ಕಣ್ಣಿಗೆ ಕಾಣದ ದೇವರನ್ನು ಗುರುತಿಸುವುದು ಹೇಗೆ?

ಈ ಭೂಮಿಯ ಮೇಲೆ ಎಲ್ಲವನ್ನು ಸೃಷ್ಟಿಸಿ, ಇದನ್ನೆಲ್ಲಾ ನೋಡಿಕೊಳ್ಳಲು ಭೂದೇವಿ ತನ್ನ ಸಂಕಲ್ಪದಿಂದಲೇ ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಸೃಷ್ಟಿಸಿದಳು. ಆದ್ದರಿಂದ ಅವರು ತಾಯಿಯ ಗರ್ಭದಲ್ಲಿ ಬೆಳೆದು ಯೋನಿಜರಾಗಿ ಜನ್ಮ ಪಡೆದವರಲ್ಲ. ಅವರು ಅಯೋನಿಜವಾದ್ದರಿಂದ ಅವರಿಗೆ ದೇಹ, ಆಕಾರ, ರೂಪ ಯಾವುದೂ ಇಲ್ಲ.

ನಾವು ಸೇವಿಸುವ ಗಾಳಿಯಂತೆ ಶಿವ ನಿರಾಕಾರನಾಗಿ ಅಶರೀರಿ. ಅವ್ಯಕ್ತ, ಸರ್ವಜ್ಞ ಸರ್ವಶಕ್ತನಾಗಿ, ಜ್ಯೋತಿರ್ಬಿಂದು ಆಗಿದ್ದಾನೆ. ಅವನ ಹೆಸರು, ಮಹಿಮೆಗಳನ್ನು ಬರೆದು ಹೇಳಿ ಮುಗಿಸಲು ಯಾರಿಂದಲೂ ಸಾಧ್ಯವಾಗಲಾರದು. ಯಾರು ತಾಯಿ ಗರ್ಭದಲ್ಲಿ ಬೆಳೆದು ಯೋನಿಜನಾಗಿ ಜನ್ಮವೆತ್ತುತ್ತಾರೋ ಅವರು ದೇವರಾಗುವುದಿಲ್ಲ. ಆದಿಮಾಯೆ ಈ ಮೂವರನ್ನು ತನ್ನ ಸಂಕಲ್ಪದಿಂದಲೇ ಸೃಷ್ಟಿಸಿ, ಮೂವರಿಗೆ ಮೂರು ಗುಣ, ಮೂರು ಕರ್ತವ್ಯಗಳನ್ನು ವಹಿಸಿ ತಾನು ಅಂತರ್ಧಾನಳಾದಳು. ಕಡೆಗೆ ತಾನು ಸ್ತ್ರೀರೂಪದಲ್ಲಿ ಬಂದು ತ್ರಿಮೂರ್ತಿಗಳಲ್ಲಿ ಒಬ್ಬನಿಗೆ ಜೊತೆಯಾಗಬೇಕೆಂದು ಬಯಸಿ ತ್ರಿಮೂರ್ತಿಗಳಲ್ಲಿ ಯಾರು ತನ್ನನ್ನು ತಡೆದುಕೊಳ್ಳಬಲ್ಲರು ಎಂದು ಪರೀಕ್ಷಿಸಿ ಶಿವನನ್ನು ಕಂಡು ಸಂತುಷ್ಟಳಾದಳು ಮಹಾಕಾಳಿ. ನಾನು ನಿನ್ನ ಸತಿಯಾಗಿ ನಿನ್ನೊಡನೆ ನೆಲೆಸುವುದಾಗಿ ಅಭಯ ನೀಡಿದಳು. ಮೊದಲ ಜನ್ಮದಲ್ಲೇ ದಕ್ಷಪ್ರಜಾಪತಿ ಮಗಳು ದಾಕ್ಷಾಯಿಣಿಯಾಗಿ ಜನಿಸಿ, ಶಿವನನ್ನು ವರಿಸಿಕೊಂಡಳು.

ಮುಕ್ಕೋಟಿ ದೇವರುಗಳಲ್ಲಿ ಭಕ್ತರು ಕೇಳಿದ ವರವನ್ನು ತಕ್ಷಣವೇ ಪ್ರಸಾದಿಸುವವನು ಶಿವನೊಬ್ಬನೇ. ಆದ್ದರಿಂದ ಭಾರತೀಯರು ಈಶ್ವರನೆಂದೂ, ಮಹಮ್ಮದೀಯರು ಅಲ್ಲಾಹ್ ಎಂದೂ ಕ್ರೈಸ್ತರು ಯವೋಹನನೆಂದು, ಜಗದೇಕ ಒಡೆಯನಾದ ಎಲ್ಲರನ್ನೂ ಕಾಯುವ ಒಬ್ಬನೇ ದೇವರಾದ ಶಿವನನ್ನು ಎಲ್ಲರೂ ಪೂಜಿಸುತ್ತಾರೆ. ಸರ್ವ ಆತ್ಮದ ತಂದೆಯೊಬ್ಬನೇ. ಅವನೇ ನಿರಾಕಾರನಾದ ಶಿವ, ಅವನೇ ಅಲ್ಲಾಹ್, ಅವನೇ ಯವೋಹನ, ಅವನೇ ಗಾಡ್. ದೇವರೊಬ್ಬ ನಾಮ ಹಲವು. ನಾನು ಹಿಂದು, ನಾನು ಮುಸಲ್ಮಾನ್, ನಾನು ಕ್ರಿಶ್ಚನ್ ಎಂಬ ಭೇದವು, ನಾಳೆ ನಾಡನ್ನಾಳುವಂತಾ ಮಕ್ಕಳಲ್ಲಿ ಜಗಳವು, ಮಾನವನ ಅಶಾಂತಿಗೆ ಅವನ ಅಶುದ್ಧ ಮನಸ್ಸು ಮತ್ತು ಸಂಕಲ್ಪಗಳೇ ಕಾರಣ. ಯಾವುದೇ ಒಂದು ಸತ್ಯವನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವಾಗ ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡು ಎಂಬ ಮಾತಿನಂತೆ, ನಾನಂತೂ ಒಂಟಿಯಲ್ಲ, ಆ ನನ್ನ ಶಿವ ಜೊತೆಗಿದ್ದಾನೆ ಎಂಬ ನಿಶ್ಚಯ ನಂಬಿಕೆ ಇದ್ದಲ್ಲಿ ಶಿವನ ಧನಾತ್ಮಕ ಚಿಂತನೆಯ ಸತ್ ಕಾರ್ಯ ಮಾಡಲು ನಿಮಗೆ ಶಕ್ತಿ, ಸ್ಫೂರ್ತಿ ತಾನಾಗಿಯೇ ಬರುವುದು. ಮಾನವ ಶರೀರದಲ್ಲಿ ಹೃದಯಕ್ಕೆ ಎಷ್ಟು ಪ್ರಾಮುಖ್ಯತೆ ಇದೆಯೋ ಅಷ್ಟೇ ಪ್ರಾಮುಖ್ಯತೆ ಕರಾವಳಿ ಜನರಿಗೆ ಈಶ್ವರನ ಮೇಲಿದೆ. ಅದಕ್ಕೆ ಹೇಳುವುದು ನಮ್ಮ ಕರಾವಳಿಯಲ್ಲಿ ಶಿವ ಮಂದಿರವಿರದ ಊರು ಉದ್ಧಾರವಾಗಲಾರದು ಎಂದು. ನಮ್ಮ ಕರಾವಳಿ ಜನರಿಗೂ ಶಿವಾಲಯಗಳಿಗೂ ವಿಶೇಷವಾದ ಬೆಸುಗೆ. ನಮ್ಮ ಕರಾವಳಿ ಜನರ ಅತ್ಯಂತ ಪ್ರೀತಿಯ ದೇವರೆಂದರೆ ಶಿವ. ಕಾರಣ ಶಿವನಿರುವಾಗ ಅನ್ಯರ ಹಂಗೇಕೆ ಎಂದು ಅವನನ್ನೇ ನಂಬಿ ಅವನ ಆಶ್ರಯದಲ್ಲೇ ಇದ್ದು, ಅವನ ನೆರವನ್ನು ಪಡೆಯುವವನು ಎಂದೂ ಪರತಂತ್ರನಾಗುವುದಿಲ್ಲ. ಕಾರಣ, ಪರಮಾತ್ಮನಾದ ಪರಶಿವನು ಪರನಲ್ಲ, ಅವನು ನಮ್ಮವನು, ನಂಬಿದವರ ಕೈ ಬಿಡಲಾರ.

ವ್ರತ, ಉಪವಾಸ, ಜಾಗರಣೆ ಆಚರಿಸುವವರು ಶಿವರಾತ್ರಿಯಂದು ಬೆಳಿಗ್ಗೆಯಿಂದ ಮರುದಿನ ಬೆಳಿಗ್ಗೆ 6

ಗಂಟೆ ತನಕ ಹಾಲು, ಫಲ ವಸ್ತುಗಳನ್ನು ಬಿಟ್ಟು, ಬೇಯಿಸಿದ ವಸ್ತುಗಳನ್ನು ತಿನ್ನಬಾರದು. ಹಗಲು ರಾತ್ರಿ ಮಲಗಬಾರದು. ನಿದ್ದೆ ಮಾಡಬಾರದು, ರಾತ್ರಿ 12 ಗಂಟೆಗೆ ಪ್ರಶಸ್ತ ಸಮಯವಾದ್ದರಿಂದ ಪೂಜೆಗೆ ಕುಳಿತುಕೊಳ್ಳುವ ಮೊದಲು ಒಂದು ಹರಿವಾಣದಲ್ಲಿ ಶಿವಲಿಂಗವನ್ನಿಟ್ಟುಕೊಂಡು (ತುಂಡಾದ, ಬಿರುಕುಬಿಟ್ಟ ಶಿವಲಿಂಗ ಪೂಜೆಗೆ ಅಶುದ್ಧ) ಅದರ ಪಕ್ಕದಲ್ಲೇ ಒಂದು ಪಾತ್ರೆಯಲ್ಲಿ ನೀರು ಇನ್ನೊಂದು ಪಾತ್ರೆಯಲ್ಲಿ ಹಾಲು ಇಟ್ಟುಕೊಂಡು ಮೂರು ದಳಗಳುಳ್ಳ ಬಿಲ್ವಪತ್ರೆಯಿಂದ ಲಿಂಗಕ್ಕೆ ಶಿವನಾಮ ಸ್ಮರಣೆ ಮಾಡುತ್ತಾ ಮೊದಲು ಕ್ಷೀರ ನಂತರ ಗಂಗಾಭಿಷೇಕ ಮಾಡಿ, ಮಂಗಳಾರತಿ ಮಾಡಿ ಶಿವ ಧ್ಯಾನದಲ್ಲಿ ಕುಳಿತುಕೊಂಡು ಶಿವನಾಮ ಸ್ಮರಣೆ, ಮನನ, ಪಠಣ, ಶ್ರವಣ ಕೀರ್ತನಾದಿಗಳಿಂದ ಶಿವನ ಗುಣಗಾನ ಮಾಡುತ್ತಾ ಭಜಿಸುವವರು ನಿರಾಕಾರ ಶಿವನನ್ನೇ ಕಾಣಲು ಪ್ರಯತ್ನಿಸಬಹುದು. ಹಾಗೆ 2, 4, 6, 12, 24 ಬಾರಿ ಪೂಜಿಸಿ ಬೆಳಿಗ್ಗೆ 6 ಗಂಟೆಗೆ ಸ್ನಾನ ಮಾಡಿ ಹತ್ತಿರವಿರುವ ದೇವಾಲಯಕ್ಕೆ ಹೋಗಿ ಅಲ್ಲಿ ತೀರ್ಥ ಪ್ರಸಾದ ಸ್ವೀಕರಿಸಿ ಮನೆಗೆ ಬಂದು ಬೇಕಾದುದನ್ನು ತಿಂದು ಮಲಗಬಹುದು. ತಮ್ಮ ಹಿಂದೂ ಸಂಸ್ಕೃತಿಯ ಕರಾವಳಿ ಜನರಿಗೆ ದೈವ ದೇವರುಗಳ ಹಬ್ಬ ಹರಿದಿನಗಳ ಆಚರಣೆ ಜನರಿಗೆ ಜ್ಞಾನ ದೇಗುಲವಿದ್ದಂತೆ. ಧಾರ್ಮಿಕ ಆಚರಣೆ ನಮ್ಮ ಸಂಸ್ಕೃತಿಯ ಪ್ರತಿಯೊಂದು ಜನರಿಗೆ ಧರ್ಮಾಭಿಮಾನ ಮೂಡಿ ಕತ್ತಲಿನಿಂದ ಬೆಳಕಿನೆಡೆಗೆ ಸಾಗಲು ಇದು ಪೂರಕ. ಈ ಸಂಪ್ರದಾಯವನ್ನು ನಮ್ಮ ಪೀಳಿಗೆಗೆ ತಲುಪಿಸುವ ಕೆಲಸವಾಗಬೇಕು.


# ಬಂಟರ ಸಂಘ ಬೆಂಗಳೂರು

## ರಂಗತರಬೇತಿ ಮತ್ತು ಯಕ್ಷಗಾನ ಸಮಿತಿ

### ಯಕ್ಷಗಾನ ಕಾರ್ಯಕ್ರಮ

**ದಿನಾಂಕ 05.03.2022, ಶನಿವಾರ, ಮಧ್ಯಾಹ್ನ 1.30ರಿಂದ**
**ಸ್ಥಳ: ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನ**

**ಕಾರ್ಯಕ್ರಮಗಳು :** **ರಂಗತರಬೇತಿಗೆ ಅಧಿಕೃತ ಚಾಲನೆ**

**ಮಾರುತಿ ಪ್ರತಾಪ**
ಸಂಘದ ಯಕ್ಷಗಾನ ತರಗತಿಯ ಮಹಿಳಾ ಸದಸ್ಯೆಯರಿಂದ

**ಸುಧನ್ವಾರ್ಜುನ ಕಾಳಗ**
ಸಂಘದ ಹವ್ಯಾಸಿ ಕಲಾವಿದರಿಂದ

ಸಂಘದ ಸದಸ್ಯರು ಹಾಗೂ ಕಲಾಭಿಮಾನಿಗಳು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ಸವಿನಯ ವಿನಂತಿ.

**ಮಧುಕರ ಎಂ. ಶೆಟ್ಟಿ**
ಗೌರವ ಕಾರ್ಯದರ್ಶಿ

**ಆರ್. ಉಪೇಂದ್ರ ಶೆಟ್ಟಿ**
ಅಧ್ಯಕ್ಷರು

**ಸಂತೋಷ್ ಕುಮಾರ್ ಶೆಟ್ಟಿ,** ಮೂಡುಬಗೆ
ಸಂಚಾಲಕರು, ರಂಗತರಬೇತಿ ಮತ್ತು ಯಕ್ಷಗಾನ ಸಮಿತಿ

**ಗುರುಪ್ರಸಾದ್ ಎನ್. ಹೆಗ್ಡೆ**
ಅಧ್ಯಕ್ಷರು, ರಂಗತರಬೇತಿ ಮತ್ತು ಯಕ್ಷಗಾನ ಸಮಿತಿ

# ಜನ ಸಮುದಾಯಕ್ಕೆ ಸಹಕಾರ ಸಂಘಗಳ ಕೊಡುಗೆ



**ಕೆ. ನಾಗರಾಜ ಶೆಟ್ಟಿ, ಕುಕ್ಕುಡೆಮನೆ**

ದೇಶದ ಅಭಿವೃದ್ಧಿ ಕೈಂಕರ್ಯದಲ್ಲಿ ಸಹಕಾರ ಸಂಘಗಳ ವ್ಯವಸ್ಥೆ ಒಂದು ಮಹತ್ವದ ಮೈಲಿಗಲ್ಲು. ಭಾರತದಂಥ ವಿಶಾಲವಾದ ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಅನಕ್ಷರಸ್ಥರನ್ನು ಹೊಂದಿರುವ ದೇಶದಲ್ಲಿ ಮಾಸ್ ಸಹಕಾರ ಸಂಘಗಳಿಗೆ ತನ್ನದೇ ಆದ ಸ್ಥಾನಮಾನವಿದೆ. ದೇಶದ ಜನರಲ್ಲಿ ಉಳಿತಾಯದ ಪ್ರಜ್ಞೆ ಮೂಡಿಸಿ ವ್ಯವಹಾರ ಕೌಶಲ್ಯಗಳ ಬಗ್ಗೆ ಅರಿವು ಮೂಡಿಸುವ ಬೃಹತ್ ಕರ್ತವ್ಯವೂ ಅವುಗಳಿಗಿದೆ.

ಯಾವುದೇ ಸಂಸ್ಥೆ ಖಾಸಗಿಯಾಗಿ ನಡೆಯುವಾಗ ಅದು ಚೆನ್ನಾಗಿ ಕಾರ್ಯ ನಿರ್ವಹಿಸುವುದು, ಜನದನಿಗೆ ಮಿಡಿಯುವುದು, ಲಾಭಗಳಿಸುವುದು, ಜನಪ್ರಿಯತೆ ಪಡೆಯುವುದು ಸರ್ವೇ ಸಾಮಾನ್ಯ. ಅದರದ್ದೇ ಆದ ನಿಯಮಾವಳಿಗಳ ಅಡಿಯಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ಗಳೊಂದಿಗೆ ಪೈಪೋಟಿ ನೀಡುವುದು ಅನಿವಾರ್ಯವಾಗಿದೆ. ಯಾವುದೇ ವ್ಯವಹಾರದಲ್ಲಿ ಗ್ರಾಹಕ ಸ್ನೇಹಿ ಅತೀ ಮುಖ್ಯವಾಗುತ್ತದೆ. ಗ್ರಾಹಕರ ನಿರೀಕ್ಷೆಗಳಿಗೆ ಸ್ಪಂದಿಸುವುದು ಸಂಸ್ಥೆಯ ದೃಷ್ಟಿಯಿಂದ ಬಹಳ ಸೂಕ್ತ.

ವ್ಯವಹಾರದಲ್ಲಿ ವಿಳಂಬ ಅಸಡ್ಡೆ, ಗ್ರಾಹಕರತ್ತ ನಿರ್ಲಕ್ಷ್ಯ ಆರಂಭವಾದರೆ ಒಮ್ಮೆ ಮನಸ್ಸಿಗೆ ತಿರಸ್ಕಾರ ಭಾವನೆ ಮೂಡಿದರೆ ಆ ಸಂಸ್ಥೆಯ ಮೇಲೆ ಇಟ್ಟ ಪ್ರೀತಿ, ವಿಶ್ವಾಸವನ್ನು ಮರಳಿ ಪಡೆಯುವುದು ಅಷ್ಟು ಸುಲಭವಲ್ಲ. ವಿಶ್ವಾಸವನ್ನು ಗಳಿಸುವುದು ಬಹಳ ಕಷ್ಟ. ಆದರೆ ಅದನ್ನು ಕಳೆದುಕೊಳ್ಳಬೇಕಾದರೆ ಹೆಚ್ಚು ಸಮಯ ಬೇಕಾಗಿಲ್ಲ. ಎಲ್ಲಾ ವ್ಯವಹಾರವು ನೀರ ಮೇಲಿನ ಗುಳ್ಳೆಯಂತೆ. ಒಮ್ಮೆ ಗ್ರಾಹಕರಿಗೆ ನಿರ್ಲಕ್ಷ್ಯ ಮನೋಭಾವ ಆರಂಭವಾದರೆ, ಗ್ರಾಹಕರ ದೂರುಗಳು ದಿನನಿತ್ಯದ ಅಹವಾಲುಗಳಾಗಿ ಕೊನೆಗೆ ಅವೆಲ್ಲವುಗಳ ಬಗ್ಗೆ ತಲೆಕೆಡಿಸಿಕೊಳ್ಳದೆಯೇ ವ್ಯವಹರಿಸುವ ಗಟ್ಟಿ ಮನಸ್ಸನ್ನು ಗ್ರಾಹಕರು ಬೆಳೆಸಿಕೊಳ್ಳುತ್ತಾರೆ. ಇದು ನಮ್ಮ ದೇಶದ ಗ್ರಾಹಕರ ಮನೋಭಾವ, ನಡೆದು ಬಂದ ಪರಂಪರೆ. ಇದೆಲ್ಲದರ ಜತೆಗೇ ಸರಕಾರದ ನೇರ ಹಸ್ತಕ್ಷೇಪ ಈ ಚಿತ್ರಣವನ್ನು ಮತ್ತಷ್ಟು ವಿಕಾರಗೊಳಿಸುವುದಿದೆ. ಇದರಿಂದಾಗಿ ಅನೇಕ ಸಹಕಾರ ಸಂಘಗಳು ಆಗಲೋ ಈಗಲೋ ದಿವಾಳಿಯಾಗುತ್ತವೇನೋ ಅನ್ನುವಷ್ಟರ ಮಟ್ಟಿಗೆ ನಷ್ಟ ಉಂಟುಮಾಡಿವೆ.

ಆದರೆ ತೀರಾ ಇತ್ತೀಚೆಗೆ ಜನರಲ್ಲಿನ ಜಾಗೃತಿಯ ಫಲವೋ ಅಥವಾ ಸಹಕಾರ ಸಂಘಗಳ ಸಿಬ್ಬಂದಿಗಳ ಕರ್ತವ್ಯ ಪ್ರಜ್ಞೆಯಲ್ಲುಂಟಾದ ಹೆಚ್ಚಳವೋ, ಆಡಳಿತ ವ್ಯವಸ್ಥೆಯ ಪ್ರಯತ್ನವೋ, ಕೈಗಾರಿಕಾ ಕ್ರಾಂತಿಯೋ ಅಥವಾ ಇವೆಲ್ಲವುಗಳು ಸೇರಿಕೊಂಡ ಫಲವೋ ಎಂಬಂತೆ ಈ ಸಂಘಗಳು ಗ್ರಾಹಕರ ಕಷ್ಟಗಳಿಗೆ ಸ್ಪಂದಿಸುತ್ತಿರುವ ಹೊಸಗಾಳಿ ಬೀಸುತ್ತಿದೆ. ಇದಕ್ಕೆ ಒಂದೆಡೆ ರಾಷ್ಟ್ರೀಕೃತ ಬ್ಯಾಂಕ್‌ಗಳ ತೀರಾ ಕಳಪೆ ಸೇವೆಗೆ ರೋಸಿಹೋದ ಗ್ರಾಹಕರು ಖಾಸಗಿ ಬ್ಯಾಂಕುಗಳು ಮತ್ತು ಸಹಕಾರಿ ಬ್ಯಾಂಕುಗಳು, ರಾಷ್ಟ್ರೀಕೃತ ಬ್ಯಾಂಕ್‌ಗಳ ಠೇವಣಿದಾರರನ್ನು ದೊಡ್ಡ ಪ್ರಮಾಣದಲ್ಲಿ ಸೆಳೆಯುತೊಡಗಿದ್ದು ಕಾರಣವಾಗಿರಬಹುದು. ಇನ್ನೊಂದೆಡೆ ಬಳಕೆದಾರರ ವೇದಿಕೆಯಂಥ ಸಂಘಟನೆಗಳು ಗ್ರಾಹಕರಿಗಾದ ಅನ್ಯಾಯದ ವಿರುದ್ಧ ಸಮರ ಸಾರಿರುವುದೂ ಕಾರಣವಿರಬಹುದು.

ಒಟ್ಟಿನಲ್ಲಿ ಸಹಕಾರ ಸಂಘಗಳ ಒಳನೋಟ ಜನ ಸಮುದಾಯಕ್ಕೆ ಈಗ ಹಿಂದಿನಷ್ಟು ಒರಟಾಗಿಲ್ಲ. ಗ್ರಾಹಕರ ಅದೃಷ್ಟವೆನ್ನಬೇಕು. ಜನಸೇವೆಯೇ ದೇವರ ಸೇವೆ ಎನ್ನುವ ತತ್ವದೊಂದಿಗೆ ಕಾರ್ಯನಿರ್ವಹಿಸುತ್ತಿರುವ ಕೆಲವೇ ಕೆಲವು ಸಿಬ್ಬಂದಿಗಳಿಂದಾಗಿ ಗ್ರಾಹಕರು ಖಾಸಗಿ ಸಹಭಾಗಿತ್ವದ ಸಂಘ ಸಂಸ್ಥೆಗಳೊಂದಿಗೆ ಉತ್ತಮ ಮಧುರ ಬಾಂಧವ್ಯ ಹೊಂದಲು ಸಾಧ್ಯವಾಗಿದೆ. ಸಾರ್ವಜನಿಕ ಸಂಪರ್ಕ ವ್ಯವಸ್ಥೆ ಉತ್ತಮ ಮಟ್ಟದಲ್ಲಿದ್ದರೆ ಗ್ರಾಹಕರು ತೃಪ್ತಿಹೊಂದುವುದರಲ್ಲಿ ಸಂಶಯವಿಲ್ಲ. ಸಹಕಾರ ಸಂಘಗಳು ಗ್ರಾಹಕರಿಗೆ ಉತ್ತಮ ಮತ್ತು ವಿಳಂಬರಹಿತ ಸೇವೆ ನೀಡುವತ್ತ ಆಲೋಚಿಸುತ್ತಿವೆ.

ಸಾಕಷ್ಟು ಸಹಕಾರ ಸಂಘಗಳು ಇಂದು ಸಂಪೂರ್ಣ ಅಥವಾ ಭಾಗಶಃ ಕಂಪ್ಯೂಟರೀಕರಣಗೊಂಡಿವೆ. ಗ್ರಾಹಕರ ಸಮಯದ ಅಭಾವದ ಬಗ್ಗೆ ಕಾಳಜಿವಹಿಸಿ, ವಿಳಂಬ ರಹಿತ ಸೇವೆ ನೀಡುವುದೇ ಇದರ ಮೂಲ ಉದ್ದೇಶ.

ಸಹಕಾರ ಸಂಘಗಳು ಸರಕಾರದ ಮುಕ್ತನೀತಿಗೆ ಹೊಂದಿಕೊಂಡು ಗ್ರಾಹಕರ ಸೇವೆಗೆ ಮುಂದಾಗಲು ಸಜ್ಜಾಗುತ್ತಿರುವುದು ಒಳ್ಳೆಯ ಲಕ್ಷಣ. ಎಲ್ಲಕ್ಕಿಂತ ಮುಖ್ಯವಾಗಿ ಸಿಬ್ಬಂದಿಗಳ ಮನೋಭೂಮಿಕೆ ಸಹಕಾರ ತತ್ವದತ್ತ ಹೆಜ್ಜೆಯಿಟ್ಟು ಕೆಲಸಮಾಡಿದರೆ ಅದರಿಂದ ಜನಸಮುದಾಯಕ್ಕೆ ನಂಬಿಕೆ, ವಿಶ್ವಾಸ ಬೆಳೆದು ಸಂಘ–ಸಂಸ್ಥೆಗಳ ಅಭಿವೃದ್ಧಿಯಲ್ಲಿ ಗ್ರಾಹಕರ ಪಾತ್ರ ಪ್ರಮುಖವಾಗುತ್ತದೆ. ಹಲವು ಹೊಸ ಹೊಸ ಸೌಲಭ್ಯಗಳನ್ನು ಕೊಟ್ಟ ಪರಂಪರೆ ಏಕಕಿಂಡಿ ಸೇವಾ ಸೌಲಭ್ಯ ಗ್ರಾಹಕರಿಗೆ ಹೊಸ ವರದಾನ.

ಗ್ರಾಹಕರೊಂದಿಗೆ ವರ್ತಿಸುವಾಗ ಸೌಜನ್ಯತೆಯನ್ನು ಮರೆಯದಿದ್ದರೆ ನಿಮ್ಮ ಶ್ರಮ ವ್ಯರ್ಥ. ಈ ದೃಷ್ಟಿಯಲ್ಲಿ ಕಂಪ್ಯೂಟರೀಕರಣ ಬಹಳ ಉತ್ತಮ ಸಹಾಯ ನೀಡಿದೆ. ಮಾತು ಕಡಿಮೆ ದುಡಿಮೆ ಹೆಚ್ಚು ಅನ್ನುವ ಬದ್ಧತೆ ಈಗ ಸೃಷ್ಟಿಯಾಗಿದೆ. ಈಗ ನಿಮ್ಮ ಖಾತೆ ಇರುವ ಶಾಖೆ ಕಂಪ್ಯೂಟರ ಸಹಾಯದಿಂದ ವ್ಯವಹರಿಸುತ್ತಿದೆಯಾದರೆ ನಿಮ್ಮ ಪಾಸ್ ಪುಸ್ತಕವನ್ನು ಓದುವುದು ನಿಮಗೀಗ ಕಷ್ಟವೇ ಅಲ್ಲ. ಅದೇ ರೀತಿ ಸರಿಯಾದ ಲೆಕ್ಕಾಚಾರ ಸಂಸ್ಥೆಯ ಸಿಬ್ಬಂದಿಯ ಮಾನಸಿಕ ಸ್ಥಿತಿ–ಗತಿಗೆ ಅನುಗುಣವಾಗಿ ತಪ್ಪು ಲೆಕ್ಕ ಘಟಿಸಿ, ತಮ್ಮ ಬ್ಯಾಂಕ್ ಬ್ಯಾಲೆನ್ಸ್ ಹೆಚ್ಚಾಗಿ ಅಥವಾ ಕಮ್ಮಿಯಾಗಿ ಕಾಣಿಸಿಕೊಳ್ಳುವ ಅವಕಾಶ ಇಲ್ಲವಲ್ಲಾ ಅನ್ನುವ ಕೊರಗಿರಬಹುದು. ಇದೆಲ್ಲಾ ಈ ವ್ಯವಸ್ಥೆಯಿಂದ ಸರಿಪಡಿಸಬಹುದು.

ರಾಷ್ಟ್ರೀಕೃತ ಬ್ಯಾಂಕ್‌ಗಳ ಸೇವೆಗಿಂತ ಸಹಕಾರ ಸಂಘಗಳ ಸೇವೆ ಜನ ಸಾಮಾನ್ಯರಿಗೆ ಈಗ ಅತೀ ವೇಗದಲ್ಲಿ ಸರಳ ರೀತಿಯಲ್ಲಿ, ಕಠಿಣ ಪರಿಶ್ರಮವಿಲ್ಲದೇ ಸಿಗುತ್ತಿರುವುದು ಆಶಾದಾಯಕ. ಉಳಿತಾಯ ಖಾತೆ, ನಿರಖು ಠೇವಣಿ ಖಾತೆಗಳು, ಸಾಲಗಳು, ಲಾಕರ್ ವ್ಯವಸ್ಥೆ, ಗಿಫ್ಟ್ ಚೆಕ್ ವ್ಯವಸ್ಥೆ, ವಿದ್ಯಾಭ್ಯಾಸದ ಸಾಲ, ವೈಯುಕ್ತಿಕ ಸಾಲ ಹೀಗೆ ಹತ್ತು ಹಲವು ಸೇವಾ ಸೌಲಭ್ಯಗಳನ್ನು ನೀಡುವಲ್ಲಿ ಗ್ರಾಹಕರೆಲ್ಲರನ್ನೂ ಸಂತೃಪ್ತಿಗೊಳಿಸುವಲ್ಲಿ ಸಾಕಷ್ಟು ಶ್ರಮವಹಿಸುತ್ತಿರುವುದು ಸಹಕಾರ ಸಂಘಗಳ ಬೆಳವಣಿಗೆಗೆ ಸಾಧ್ಯವಾಗಿದೆ.

ಗ್ರಾಮೀಣ ಪ್ರದೇಶಗಳಲ್ಲಂತೂ ಕೃಷಿ ಸಾಲಗಳನ್ನು ನೀಡಿ ಕೃಷಿಕರಿಗೆ ತಮ್ಮ ಆರ್ಥಿಕ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಲು ಪೂರಕ ಸಹಾಯ ಮಾಡಿ ಸಹಕಾರ ಸಂಘಗಳೇ ಅವರಿಗೆ ಜೀವನಾಧಾರವಾಗಿದೆ. ಆದರೆ ಎಷ್ಟೋ ಬಾರಿ ಸಿಬ್ಬಂದಿಯ ಅಲಕ್ಷ್ಯ, ಅಸಡ್ಡೆ, ಅದಕ್ಷತೆಗಳಿಂದಲೇ ಗ್ರಾಹಕರಿಗೆ ಕಿರಿ–ಕಿರಿ ಉಂಟಾಗುವುದು ಸತ್ಯ. ಕಂಪ್ಯೂಟರ್‌ಗಳು ಇಂಥ ಮಾನವ ನಿರ್ಮಿತ ಸಮಸ್ಯೆಗಳಿಗೂ ಪರಿಹಾರ ನೀಡುತ್ತಲಿವೆ ಎಂಬುದು ಆಶಾದಾಯಕ.

ಕಂಪ್ಯೂಟರ್ ಬಳಕೆ, ಉತ್ತಮ ಚುರುಕಾಗಿರುವ ಸಿಬ್ಬಂದಿಗಳ ಆಯ್ಕೆ, ಆಡಳಿತ ಮಂಡಳಿಗಳ ನಿರ್ದೇಶಕರ ಸಹಕಾರ, ಗ್ರಾಹಕರ ಅವಶ್ಯಕತೆಗಳಿಗೆ ಸ್ಪಂದಿಸುವ ಪರಿಪಾಠ ಬೆಳೆಯುತ್ತಿರುವುದು ಸ್ವಾಗತಾರ್ಹ. ಆದರೆ ನಮ್ಮ ದೇಶದ ಸಹಕಾರ ವ್ಯವಸ್ಥೆಯಲ್ಲಿ ಆಗಬೇಕಾದುದು ಇನ್ನೂ ಬಹಳಷ್ಟಿದೆ.

- ಸಿಬ್ಬಂದಿಗಳಿಗೆ ಅವರ ತರಬೇತಿಯ ಅವಧಿಯಲ್ಲಿ ಗ್ರಾಹಕರೊಂದಿಗೆ ಸೌಜನ್ಯಯುತವಾಗಿ ವರ್ತಿಸುವ ಬಗ್ಗೆ ತಯಾರು ಮಾಡುವುದಕ್ಕೆ ಹೆಚ್ಚಿನ ಪ್ರಾಮುಖ್ಯತೆ ದೊರೆಯಬೇಕು.
- ಗ್ರಾಹಕರ ವ್ಯವಹಾರಗಳು ಮೂರನೆಯ ವ್ಯಕ್ತಿಗೆ ಅನಾವಶ್ಯಕವಾಗಿ ಮತ್ತು ಖಾತೆದಾರನ ಅನುಮತಿ ಇಲ್ಲದೆ ಬಯಲಾಗಬಾರದು. ಇಂಥ ವಿಶ್ವಾಸಾರ್ಹತೆಯನ್ನು ಸಂಘ–ಸಂಸ್ಥೆಗಳು ಹೊಂದಬೇಕು.
- ಗ್ರಾಹಕರ ಇಚ್ಛೆಗನುಗುಣವಾಗಿ ಯಾವುದೇ ಕಾನೂನು ಕಟ್ಟಳೆಗಳ ಸುಳಿಯಲ್ಲಿ ಗ್ರಾಹಕನ ಹಕ್ಕುದಾರ ಸಿಕ್ಕಿ ಹಾಕಿಕೊಳ್ಳದಂತೆ ಮೊದಲೇ ಗ್ರಾಹಕರಿಗೆ ಸೂಕ್ತ ಮಾರ್ಗದರ್ಶನ ಮಾಡುವುದು ಸಹಕಾರ ಸಂಘಗಳ ಕರ್ತವ್ಯವಾಗಿದೆ.

ಈಗಾಗಲೇ ಸಹಕಾರ ವ್ಯವಸ್ಥೆ ಸಾರ್ವಜನಿಕ ಜೀವನದಲ್ಲಿ ಹಾಸುಹೊಕ್ಕಾಗಿ ಬೆಳೆದುಬಿಟ್ಟಿದೆ. ಪ್ರತಿಯೊಬ್ಬರಿಗೂ ಸಹಕಾರ ಸಂಘಗಳೊಂದಿಗಿನ ವ್ಯವಹಾರ ಅನಿವಾರ್ಯವೆನ್ನಿಸಿದೆ. ಪಡಿತರ ವ್ಯವಸ್ಥೆಯಿಂದ ಹಿಡಿದು ವಿವಿಧ ಸಾಲಗಳಿಗಾಗಿ ಸಹಕಾರ ಸಂಘಗಳು ಸಾಕಷ್ಟು ಕೊಡುಗೆಯನ್ನು ಜನ ಸಾಮಾನ್ಯರಿಗೆ ನೀಡುತ್ತಿರುವುದು ಇದು ದಿನದಿಂದ ದಿನಕ್ಕೆ ಬಲಗೊಳ್ಳುತ್ತಿರುವುದು ಸರಕಾರಗಳು ಸಾಕಷ್ಟು ಸಹಾಯ, ನೆರವನ್ನು ನೀಡುತ್ತಿರುವುದು ಇದರ ಅನಿವಾರ್ಯತೆಯನ್ನು ನಾವು ಮನಗಾಣಬಹುದು.

ಈ ನಿಟ್ಟಿನಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ಗಳಿಗಿಂತ ಸಹಕಾರ ಸಂಘಗಳು ಜನ ಸಾಮಾನ್ಯರಿಗೆ ಹತ್ತಿರವಾಗುತ್ತಿರುವುದು ತುಂಬಾ ಆಶಾದಾಯಕ. ಆದರೆ ಒಂದು ಭಯ ಇಂದಿಗೂ ಜನಸಾಮಾನ್ಯರಲ್ಲಿ ಕಾಡುತ್ತಿರುವುದೇನೆಂದರೆ ಸಹಕಾರ ಸಂಘಗಳಲ್ಲಿ ತಾವಿಟ್ಟ ನಿರಖು ಠೇವಣಿಗಳ ಭದ್ರತೆ ಬಗ್ಗೆ ಈಗೀಗ ರಿಸರ್ವ್ ಬ್ಯಾಂಕ್ ಸಾಕಷ್ಟು ಪೂರ್ವಭಾವಿ ಭದ್ರತೆಯನ್ನು ಒದಗಿಸುತ್ತಿರುವುದರಿಂದ ಸಹಕಾರ ಸಂಘಗಳ ಮೇಲೆ ವಿಶ್ವಾಸ ಹೊಂದಲು ಸಾಧ್ಯವಾಗುತ್ತಿದೆ. ಹಳ್ಳಿಗಳಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ಗಳಿಗಿಂತ ಸಹಕಾರ ಸಂಘಗಳಲ್ಲೇ ಜನಸಾಮಾನ್ಯರು ಹೆಚ್ಚಿನ ವಿಶ್ವಾಸ, ವ್ಯವಹಾರ ಮಾಡುತ್ತಿರುವುದು ಜನ-ಸಾಮಾನ್ಯರ ನಂಬಿಕೆಯನ್ನು ಉಳಿಸಿಕೊಂಡಿರುವುದಕ್ಕೆ ಸಾಕ್ಷಿ ಅಂತ ಹೇಳಬೇಕಾಗಿದೆ.

ಸಹಕಾರಿ ಬ್ಯಾಂಕ್‌ಗಳು ನಂಬಿಕೆ ಆಧಾರದ ಮೇಲೆ ನಡೆಯುತ್ತವೆ. ಈ ಬ್ಯಾಂಕುಗಳು ಮಧ್ಯಮ ಮತ್ತು ಕೆಳಮಧ್ಯಮ ವರ್ಗದ ಹಣಕಾಸಿನ ಅಗತ್ಯಗಳಿಗೆ ಸ್ಪಂದಿಸುವ ಕೆಲಸ ಮಾಡುತ್ತಿವೆ. ಆದರೆ ಇತ್ತೀಚೆಗೆ ನಡೆದಿರುವ ಎರಡು ಬೆಳವಣಿಗೆಗಳು ಠೇವಣಿದಾರರ ನಿದ್ದೆಗೆಡಿಸಿದೆ.


ಮಹಾರಾಷ್ಟ್ರದ ಪಂಜಾಬ್ ಆಂಡ್ ಮಹಾರಾಷ್ಟ್ರ ಸಹಕಾರಿ ಬ್ಯಾಂಕ್ ಮತ್ತು ಬೆಂಗಳೂರಿನ ಶ್ರೀ ಗುರು ರಾಘವೇಂದ್ರ ಸಹಕಾರಿ ಬ್ಯಾಂಕ್‌ಗಳ ಮೇಲೆ ಆರ್.ಬಿ.ಐ. ನಿರ್ಬಂಧ ಹೇರಿದ್ದು ಗ್ರಾಹಕರಿಗೆ ಠೇವಣಿ ಪಡೆಯಲು ಮಿತಿ ಹೇರಿದೆ. ಇದರಿಂದ ಠೇವಣಿದಾದರು ಅದರಲ್ಲಿಯೂ ನಿವೃತ್ತಿ ಜೀವನ ಸಾಗಿಸುತ್ತಿರುವವರು ಬಹಳಷ್ಟು ಸಮಸ್ಯೆಗಳಿಗೆ ಸಿಲುಕಿಕೊಂಡಿದ್ದಾರೆ.

ಸಹಕಾರಿ ಬ್ಯಾಂಕ್‌ಗಳಲ್ಲಿ ನಡೆಯುವ ಅವ್ಯವಹಾರ ಅಥವಾ ಆಕ್ರಮಗಳಿಂದಾಗಿ ಠೇವಣಿದಾರರು ತಮ್ಮದೇ ಹಣವನ್ನು ಅಗತ್ಯಬಿದ್ದಾಗ ಬೇಕಾದಷ್ಟು ಪಡೆಯದೇ ಇರುವ ವಾತಾವರಣ ನಿರ್ಮಾಣವಾಗಿದೆ. ಇದು ಸಹಕಾರಿ ಬ್ಯಾಂಕ್‌ಗಳ ಬಗ್ಗೆ ಜನಸಾಮಾನ್ಯರಲ್ಲಿ ಅಭದ್ರತೆಯ ಭಾವ ಮೂಡಿಸುತ್ತದೆ.

ಸಹಕಾರಿ ಬ್ಯಾಂಕ್‌ಗಳನ್ನು ರಾಜಕಾರಣಿಗಳು, ಬಂಡವಾಳ ಶಾಹಿಗಳು ಮತ್ತು ಕೆಲ ಪ್ರಭಾವಿ ವ್ಯಕ್ತಿಗಳು ತಮ್ಮ ಸ್ವಂತ ಆಸ್ತಿ ಎಂಬಂತೆ ಪರಿಗಣಿಸಿದ್ದಾರೆ. ನಿರ್ದೇಶಕ ಮಂಡಳಿಗಳು ಬ್ಯಾಂಕಿಂಗ್ ನಿಯಂತ್ರಣ ಕ್ರಮಗಳನ್ನು ಗಾಳಿಗೆ ತೂರುತ್ತಿವೆ. ವಸೂಲಾಗದ ಸಾಲದ ಹೊರೆ ಹೆಚ್ಚುತ್ತಿದೆ. ತಮಗೆ ಬೇಕಾದವರಿಗೆ ಸಾಲ ವಿತರಿಸುವುದು, ಅನಗತ್ಯ ದುಂದು ವೆಚ್ಚಗಳು ಇತ್ಯಾದಿ ಕ್ರಮಗಳಿಂದಾಗಿ ಬ್ಯಾಂಕ್‌ಗಳು ದಿವಾಳಿಯಾಗುತ್ತಿವೆ. ಠೇವಣಿದಾರರ ಹಣಕ್ಕೆ ರಕ್ಷಣೆಯೇ ಇಲ್ಲದಂತಾಗಿದೆ. ಆಡಳಿತ ಮಂಡಳಿಯ ಅದಕ್ಷತೆ ಮತ್ತು ಸ್ವೇಚ್ಛಾಚಾರದ ಕಾರಣವೇ ಹಲವಾರು ಸಹಕಾರಿ ಬ್ಯಾಂಕ್‌ಗಳು ಗ್ರಾಹಕರ ಹಿತರಕ್ಷಣೆ ಮಾಡದೇ ವೈಫಲ್ಯದ ಹಾದಿಯಲ್ಲಿ ಸಾಗುತ್ತಿವೆ ಎನ್ನುವುದು ಅವುಗಳ ಮೇಲಿರುವ ಗಂಭೀರ ಆರೋಪಗಳಾಗಿವೆ.

ಆದರೆ ಒಂದೆರಡು ಸಹಕಾರಿ ಬ್ಯಾಂಕ್‌ಗಳಲ್ಲಿ ಸಮಸ್ಯೆ ಆಗಿದೆ ಎಂದಾಕ್ಷಣ ಎಲ್ಲವನ್ನೂ ಒಂದೇ ತಕ್ಕಡಿಯಲ್ಲಿ ಇಟ್ಟು ಅಳೆಯಲು ಬರುವುದಿಲ್ಲ. ಸಹಕಾರಿ ಬ್ಯಾಂಕ್‌ಗಳು ಮೊದಲಿನಿಂದಲೂ ಗ್ರಾಹಕರ ವಿಶ್ವಾಸ ಕಾಯ್ದುಕೊಂಡು ಬಂದಿವೆ. ಇದಕ್ಕೊಂದು ಪರಿಹಾರ ಏನೆಂದರೆ ಪ್ರತೀ ಮೂರು ತಿಂಗಳಿಗೊಮ್ಮೆ ಬ್ಯಾಂಕುಗಳು ತಮ್ಮ ವಹಿವಾಟಿನ ಪ್ರತಿಯೊಂದು ಮಾಹಿತಿಯನ್ನು ಆರ್.ಬಿ.ಐ.ಗೆ ನೀಡಬೇಕು. ಆಗ ಮಾತ್ರವೇ ಬ್ಯಾಂಕ್ ವ್ಯವಹಾರಗಳನ್ನು ಸೂಕ್ಷ್ಮವಾಗಿ ಅವಲೋಕಿಸಲು ಮತ್ತು ಸಮಸ್ಯೆಗಳು ಕಂಡು ಬಂದರೆ ತಕ್ಷಣವೇ ಅಗತ್ಯ ಕ್ರಮ ಕೈಗೊಳ್ಳಲು ಸಾಧ್ಯವಾಗಲಿದೆ.

# ಮಂಗಳೂರಿನ ಮುಖ್ಯ ರಸ್ತೆಯೊಂದಕ್ಕೆ ಮುಲ್ಕಿ ಸುಂದರ್ ರಾಮ್ ಶೆಟ್ಟಿಯವರ ಹೆಸರು



ಎ.ಬಿ. ಶೆಟ್ಟಿ

ದೇಶದಲ್ಲಿ ನಾಡಿಗೆ, ಸಮಾಜಕ್ಕೆ ಸೇವೆಸಲ್ಲಿಸಿ, ಸಮಾಜಕ್ಕೆ ಮಾದರಿಯಾಗಿ, ಇನ್ನೊಬ್ಬರಿಗೆ ದಾರಿದೀಪವಾಗಿ, ಲಕ್ಷಾಂತರ ಜನರ ಬದುಕಿಗೆ ಆಸರೆಯಾಗಿ ಮತ್ತು ಸಮಾಜದಲ್ಲಿ ರೋಲ್ ಮಾಡೆಲ್ ಅಗಿ ಬದುಕಿನ ದಾರಿ ತೋರಿಸಿದ ಮತ್ತು ಜೀವನದ ಅದರ್ಶಗಳನ್ನು ಬಿತ್ತಿ ಬೆಳೆಸಿದ ಮಹನೀಯರ ಹೆಸರುಗಳನ್ನು ನಗರದ, ಪಟ್ಟಣದ ಮತ್ತು ಹಳ್ಳಿಗಳ ಮುಖ್ಯ ರಸ್ತೆಗಳಿಗೆ, ವೃತ್ತಗಳಿಗೆ, ಬಂದರುಗಳಿಗೆ, ಬೃಹತ್ ಸೇತುವೆಗಳಿಗೆ, ಹೆದ್ದಾರಿಗಳಿಗೆ, ಸಂಸ್ಥೆಗಳಿಗೆ, ಆಸ್ಪತ್ರೆಗಳಿಗೆ, ಬಸ್ ನಿಲ್ದಾಣ, ರೇಲ್ವೆ ಸ್ಟೇಷನ್ ಮತ್ತು ಏರ್ ಪೋರ್ಟ್‌ಗಳಿಗೆ ಇಟ್ಟು ಅವರನ್ನು ಸದಾ ನೆನೆಯುವುದು, ಸ್ಮರಿಸಿಕೊಳ್ಳುವುದು ಈ ದೇಶದಲ್ಲಿ ಲಾಗಯಾಯ್ತನಿಂದ ನಡೆದು ಬಂದ ಪದ್ದತಿ, ಪರಂಪರೆ ಮತ್ತು ಭಾರತೀಯ ಸಂಸ್ಕ್ರತಿಯ ತಿರುಳು. ಈ ಸಂಸ್ಕ್ರತಿಯ ಮುಂದುವರೆದ ಭಾಗವಾಗಿ ವಿಜಯಾ ಬ್ಯಾಂಕ್ ನೌಕರರ, ಅಧಿಕಾರಿಗಳ ಮತ್ತು ನಿವೃತ್ತರ ಸಂಘಟನೆಗಳು, ಒಂದು ಕಾಲಕ್ಕೆ ವಿಜಯಾ ಬ್ಯಾಂಕ್ ನ ಪ್ರಧಾನ ಕಚೇರಿ ಇದ್ದ "ಲೈಟ್ ಹೌಸ ಹಿಲ್" ರಸ್ತೆಗೆ, ವಿಜಯಾ ಬ್ಯಾಂಕ್‌ನ್ನು, ಬ್ಯಾಂಕಿಂಗ್ ಮತ್ತು ಹೋಟೆಲ್ ಉದ್ಯಮಕ್ಕೆ ಹೆಸರಾದ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯನ್ನು ದೇಶಕ್ಕೆ ಮತ್ತು ಜಗತ್ತಿಗೆ ಪರಿಚಯಿಸಿದ, ತನ್ಮೂಲಕ ಮಹಾನ್ ಬ್ಯಾಂಕರ್ ಗೌರವಕ್ಕೆ ಪಾತ್ರರಾದ ಮುಲ್ಕಿ ಸುಂದರ್ ರಾಮ್ ಶೆಟ್ಟಯವರ ಹೆಸರನ್ನು ಇಡುವಂತೆ ಪ್ರೇರೇಪಿಸಿದ್ದರಲ್ಲಿ ಉತ್ಪ್ರೇಕ್ಷೆ ಕಾಣುವುದಿಲ್ಲ.

ಹತ್ತಾರು ರೈತರಿಂದ ಸ್ಥಾಪಿಸಲ್ಪಟ್ಟು, ಅವಿಭಜಿತ ದಕ್ಷಿಣಕನ್ನಡ ಜಿಲ್ಲೆ ಮತ್ತು ಕರ್ನಾಟಕ ರಾಜ್ಯಕ್ಕೆ ಸೀಮಿತವಾಗಿದ್ದ ಒಂದು ಸಣ್ಣ ಬ್ಯಾಂಕನ್ನು ದೇಶದ ಉದ್ದಗಲಕ್ಕೂ ವಿಸ್ತರಿಸಿ, ವಿಜಯಾ ಬ್ಯಾಂಕನ್ನು ರಾಷ್ಟ್ರೀಯ ಬ್ಯಾಂಕನ್ನಾಗಿ ಪರಿವರ್ತಿಸಿದ ಹೆಗ್ಗಳಿಕೆಗೆ ಪಾತ್ರರಾದ ಅವರು, ಹಣಕಾಸು ಮಂತ್ರಾಲಯ, ರಿಸರ್ವ್ ಬ್ಯಾಂಕ್, ದೇಶದ ಔದ್ಯೋಗಿಕ ವಲಯ ಮತ್ತು ಬ್ಯಾಂಕಿಂಗ್‌ನಲ್ಲಿ ಇವರ ಸ್ಪರ್ಧಿಗಳು ಎದ್ದು ನಿಂತು ನೋಡುವಂತೆ ಮಾಡಿದ್ದರು. ಬ್ಯಾಂಕಿಂಗ್ ಸೇವೆಯನ್ನು ವಿಸ್ತರಿಸುವ ನಿಟ್ಟಿನಲ್ಲಿ ಇತರ ಬ್ಯಾಂಕುಗಳು ಮಡಿವಂತಿಕೆ, ಎಚ್ಚರಿಕೆ ಮತ್ತು ರಕ್ಷಣಾತ್ಮಕ ನಡೆ ತೋರಿಸುವಾಗ, ಈಶಾನ್ಯ ಭಾರತ ಮತ್ತು ಕಾಶ್ಮೀರದಲ್ಲಿ ಕಾಲಿಡಲು ಹೆದರುತ್ತಿರುವಾಗ, ವರ್ಷಕ್ಕೆ ಕೇವಲ ಒಂದೆರಡು ಶಾಖೆಗಳನ್ನು ತೆರೆಯಲು ಹಿಂದೇಟು ಹಾಕುತ್ತಿರುವಾಗ, ಅವರು ಇಂದಿರಾ ಗಾಂಧಿಯವರ ಹುಟ್ಟು ಹಬ್ಬದ ದಿನ 26 ಶಾಖೆಗಳನ್ನು ತೆರೆದು ಬ್ಯಾಂಕಿಂಗ್ ವಲಯದಲ್ಲಿ ಸುನಾಮಿ ಎಬ್ಬಿಸಿದ್ದರು. ಅರ್ಹತೆ ಮತ್ತು ಅನಿವಾರ್ಯತೆಯ ಅಧಾರದ ಮೇಲೆ ಜಾತಿ, ಮತ, ಪಂಥ ಮತ್ತು ಭಾಷೆಗಳ ಹಿನ್ನೆಲೆ ನೋಡದೇ ಬಾಗಿಲು ಬಡಿದವರಿಗೆಲ್ಲಾ ಉದ್ಯೋಗ ನೀಡಿದ್ದರು. ಅವರ ಶಬ್ದ ಕೋಶದಲ್ಲಿ "ಮಾಡೋಣ ಮತ್ತು ನೋಡೋಣ" ಇರದೇ, ''ಮಾಡು ಇಲ್ಲವೇ ಮಡಿ'' ಮುನ್ನೆಲೆಯಲ್ಲಿತ್ತು. ಪ್ರತಿ ವಿಚಾರದಲ್ಲೂ ಖಡಾ ಖಂಡಿತ ನಿರ್ಧಾರ ತೆಗದುಕೊಳ್ಳುತ್ತಿದ್ದು, ಅವರು ಅದಕ್ಕೆ ಬದ್ಧರಾಗಿರುತ್ತಿದ್ದರಲ್ಲದೇ ಅದರ ಸಾಧಕ ಬಾಧಕಗಳ ಹೊಣೆ ಹೊರುತ್ತಿದ್ದರು. ಇವರ ಈ ವೈಶಿಷ್ಟ್ಯಗಳೇ ದೇಶಾದ್ಯಂತ ತುಂಬಿರುವ ಅವರ

ಅಭಿಮಾನಿ ಬಳಗವನ್ನು ಮಂಗಳೂರಿನ ಒಂದು ಮುಖ್ಯ ರಸ್ತೆಗೆ ಅವರ ಹೆಸರು ಇಡಲು ಪ್ರೇರೇಪಿಸಿದ್ದು.

2015ರಲ್ಲಿ ಅವರ ಜನ್ಮ ಶತಮಾನೋತ್ಸವದ ಸಂದರ್ಭದಲ್ಲಿ ಈ ನಾಮಕರಣ ಮಾಡಬೇಕೆಂದು 2010 ರಿಂದಲೇ ತಯಾರಿ ನಡೆದಿತ್ತು. ಇದಕ್ಕೆ ಸಂಬಂಧಪಟ್ಟ ಕಾನೂನು ಪ್ರಕ್ರಿಯೆಗಳೆಲ್ಲಾ ನಡೆದು, ರಾಜ್ಯಪಾಲರ ಒಪ್ಪಿಗೆಯೊಂದಿಗೆ 24.05.2017 ರಂದು ರಾಜ್ಯ ಸರ್ಕಾರದ ಅನುಮೋದನೆಯನ್ನೂ ಪಡೆದಿತ್ತು.

ಎಲ್ಲಾ ಒಳ್ಳೆಯ ಕೆಲಸಗಳಿಗೂ ವಿಘ್ನಗಳು ಹಲವು ಎನ್ನುವಂತೆ, ಈ ನಾಮಕರಣದ ಏರ್ಪಾಡು ನಡೆಯುತ್ತಿರುವಾಗ ಕೆಲವು ಪಟ್ಟ ಭದ್ರ ಹಿತಾಸಕ್ತಿಗಳು, ಅವರು ಮಂಗಳೂರಿಗೆ ಹೊರಗಿನವರು ಎನ್ನುವ ಕುತ್ಸಿತ–ಕ್ಷುಲ್ಲಕ ಕಾರಣವನ್ನು ಮುಂದೆ ಮಾಡಿ, ನಾಮಕರಣಕ್ಕೆ ಅನುಮೋದನೆ ನೀಡಿದ ಸಚಿವಾಲಯದಿಂದಲೇ ತಡೆ ಅಜ್ಞೆ ತಂದಿದ್ದು ಸುಂದರ್ ರಾಮ್ ಶೆಟ್ಟಿಯವರ ಅಭಿಮಾನಿಗಳಿಗೆ ದಿಗ್ಭ್ರಾಂತಿ ಮೂಡಿಸಿತ್ತು. ದೇಶದಲ್ಲಿ ಎಲ್ಲೂ ಮತ್ತು ಯಾರಿಗೂ ಅನ್ವಯವಾಗದ ಈ "ಹೊರಗಿನವರು" ಕಾರಣ ಎಲ್ಲರಿಗೂ ದಿಗಿಲು ಬಡಿಸಿತ್ತು. ಕೆಲವು ಮಹಾನ್ ವ್ಯಕ್ತಿಗಳಿಗೆ ಯಾವುದೇ ಗಡಿ ಇರುವುದಿಲ್ಲ ಎನ್ನುವುದನ್ನು ಮರೆತು ಈ ಸಾತ್ವಿಕ ಕಾರ್ಯಕ್ಕೆ ತಡೆ ಒಡ್ಡಲಾಗಿತ್ತು.

ಈ ಬೆಳವಣಿಗೆಯನ್ನು ಸವಾಲ್ ಅಗಿ ಸ್ವೀಕರಿಸಿದ ವಿಜಯಾ ಬ್ಯಾಂಕ್ ನೌಕರರ, ಅಧಿಕಾರಿಗಳ, ನಿವೃತ್ತರ ಸಂಘಟನೆಗಳು ಮತ್ತು ಸುಂದರ್ ರಾಮ್ ಶೆಟ್ಟಿಯವರ ಅಭಿಮಾನಿ ಬಳಗದವರು, ಪ್ರಜ್ಞಾವಂತ ರಾಜಕಾರಣಿಗಳು, ಜನರು ಮತ್ತು ಮಾಧ್ಯಮದ ಸಹಾಯದೊಂದಿಗೆ ನಿರಂತರ ಹೋರಾಟ ನಡೆಸಿ ತಡೆಯಾಜ್ಞೆಯನ್ನು ತೆರವು ಗೊಳಿಸಿದ್ದಲ್ಲದೇ, 24.09.2020 ರಂದು "ಲೈಟ್ ಹೌಸ್ ಹಿಲ್" ರಸ್ತೆಗೆ "ಮುಲ್ಕಿ ಸುಂದರ್ ರಾಮ್ ಶೆಟ್ಟಿ" ರಸ್ತೆ ಎಂದು ಮಂಗಳೂರು ನಗರ ಸಭೆಯವತಿಯಿಂದ ಹಲವಾರು ಗಣ್ಯರು ಮತ್ತು ಅಭಿಮಾನಿಗಳ ಸಮಾಗಮದಲ್ಲಿ ಅನಾವರಣ ಮಾಡಲಾಯಿತು. ಮುಲ್ಕಿ ಸುಂದರ್ ರಾಮ್ ಶೆಟ್ಟಿಯವರ ಹೆಸರನ್ನು ಅಜರಾಮರವಾಗಿ ಉಳಿಯುವಂತೆ ಮಾಡಲಾಯಿತು.

# Congratulations



Our member, Sri Rajaram Shetty Uppala has been honoured by the Ministry of Health and FW, Govt. of Karnataka on 1st Dec 2021, for his meritorious services of helping people get blood donations and plasma donations during the Covid crisis. This is the second award after he was recently honoured by the Police Commissioner of Bangalore for being the Traffic Warden- Covid Warrior.

Bunts Sangha Bangalore congratulates him and wishes him all the best.

# ಹೊಸ ವರ್ಷ ಹಾಗೂ ಮಕರ ಸಂಕ್ರಾತಿಯ ಶುಭಾಶಯಗಳೊಂದಿಗೆ



ಶ್ರೀ ಕೆ. ರತ್ನಾಕರ ಶೆಟ್ಟಿ ಆದ ನಾನು ಕಳೆದ ಎರಡೂವರೆ ದಶಕಗಳಿಂದ ಬೆಂಗಳೂರು ಬಂಟರ ಸಂಘದ ಸಕ್ರಿಯ ಸದಸ್ಯರಾಗಿದ್ದು, ಈ ಸಂಸ್ಥೆಯ ಪ್ರಗತಿಗೆ ಪರಿಶ್ರಮಿಸುತ್ತಾ ಇದ್ದೇನೆ. ನಮ್ಮ ಸಂಘ ರೂಪಿಸುವ ಸಕಲ ಸಮುದಾಯಪರ ಯೋಜನೆಗಳ ಅನುಷ್ಠಾನಕ್ಕೆ ಹಲವಾರು ಕೊಡುಗೆಗಳನ್ನು ನೀಡುತ್ತಾ ಬಂದಿದ್ದೇನೆ.

ನಾನು ಬಂಟರ ಸಂಘದ ಕಾರ್ಯಕಾರಿ ಸಮಿತಿಗೆ ಎರಡು ಬಾರಿ ಚುನಾಯಿತನಾಗಿದ್ದು, ಈ ಅವಧಿಯಲ್ಲಿ ಸಂಘದ ಅಧಿದೇವತೆ ಶ್ರೀ ವರಸಿದ್ಧಿ ವಿನಾಯಕ ಸ್ವಾಮಿ ಮಂದಿರಕ್ಕೆ ಅಗತ್ಯವಿರುವ ಪರಿಕರಗಳ ಪೂರೈಕೆ, ನವೀಕರಣ ಮತ್ತು ಮಂದಿರದ ಆವರಣ ಸ್ವಚ್ಛತೆ, ನೆಲಕ್ಕೆ ಗ್ರಾನೈಟ್ ಹಾಸುವಿಕೆ ಮುಂತಾದ ಕೆಲಸಗಳಲ್ಲಿ ಆಸಕ್ತಿಯಿಂದ ತೊಡಗಿಸಿಕೊಂಡಿದ್ದೇನೆ. ಕಾರ್ಯಕಾರಿ ಸಮಿತಿಯ ಸದಸ್ಯನಾಗಿದ್ದ ಪ್ರಥಮ ಅವಧಿಯಲ್ಲಿ ಶ್ರೀ ವರಸಿದ್ಧಿ ವಿನಾಯಕ ಸ್ವಾಮಿ ಮಂದಿರ ಸಮಿತಿಯ ಅಧ್ಯಕ್ಷನಾಗಿ ಆಯ್ಕೆಯಾಗಿದ್ದೆ. ಈ ಅವಧಿಯಲ್ಲಿ ಮಂದಿರಕ್ಕೆ ಅಗತ್ಯವಿರುವ ಪರಿಕರಗಳನ್ನು, ದೀಪಗಳು, ಕಪಾಟುಗಳು, ಸಿಸಿ ಟಿವಿ ಅಳವಡಿಕೆ ಮೊದಲಾದ ಕಾರ್ಯಗಳನ್ನು ನಿರ್ವಹಿಸಿದ್ದೇನೆ. ಶ್ರೀ ವರಸಿದ್ಧಿ ವಿನಾಯಕ ಸ್ವಾಮಿಗೆ ಚಿನ್ನದ ಸಟ್ಟಿಗೆ, ಸ್ವರ್ಣ ಕಮಲವನ್ನು ದಿನಾಂಕ 14.04.2017ರಂದು ವಿಜೃಂಭಣೆಯಿಂದ ಸಮರ್ಪಿಸಲಾಗಿದೆ.

ಇದಾದ ನಂತರ ಶ್ರೀ ಸ್ವಾಮಿಗೆ ಬೆಳ್ಳಿಯ ಕವಚ, ಬೆಳ್ಳಿಯ ಪ್ರಭಾವಳಿ, ಬೆಳ್ಳಿಯ ಪಾಣಿಪೀಠ, ಮೂಷಿಕ ವಾಹನಕ್ಕೆ ಬೆಳ್ಳಿ ಕವಚವನ್ನು ತೊಡಿಸಿ ಅಲಂಕರಿಸಲಾಯಿತು. ನಂತರ ಶ್ರೀ ಪೇಜಾವರ ಮಠದ ಹಿರಿಯ ಸ್ವಾಮಿ ಪೂಜ್ಯ ಶ್ರೀ ಶ್ರೀ ಶ್ರೀ ವಿಶ್ವೇಶ್ವತೀರ್ಥ ಶ್ರೀ ಪಾದರವರ ದಿವ್ಯ ಸನ್ನಿಧಿಯಲ್ಲಿ ಶ್ರೀ ವರಸಿದ್ಧಿ ವಿನಾಯಕ ಮಂದಿರದ ಪ್ರಧಾನ ಹೆಬ್ಬಾಗಿಲಿಗೆ ರಜತ ದ್ವಾರ ಹಾಗೂ ಪೀಠವನ್ನು ದಿನಾಂಕ 14.04.2018ರಂದು ಭಕ್ತಿಪೂರ್ವಕವಾಗಿ ಸಮರ್ಪಿಸಲಾಯಿತು. ಇದೇ ಅವಧಿಯಲ್ಲಿ ಮೆಟ್ರೋ ಸಂಸ್ಥೆಯ ಸಹಕಾರದೊಂದಿಗೆ ಪ್ರಾಂಗಣಕ್ಕೆ ಗ್ರಾನೈಟ್ ಹಾಸಲಾಯಿತು. ಪುಟ್ಟ ಕೈ ತೋಟವನ್ನು ನಿರ್ಮಿಸಲಾಯಿತು. ಅಂತೆಯೇ ಹೆಚ್ಚು ಹೆಚ್ಚು ಶಾಶ್ವತ ಪೂಜಾಕರ್ತರನ್ನು ಸೇರಿಸಲಾಗಿತ್ತು. ಇವೆಲ್ಲಾ ಯೋಜನೆಗಳಿಗೆ ಅಗತ್ಯವಿರುವ ಸಂಪನ್ಮೂಲವನ್ನು ದಾನಿಗಳಿಂದ, ಭಕ್ತಾಧಿಗಳಿಂದ ಹಾಗೂ ಹಿತಚಿಂತಕರಿಂದ ಕ್ರೋಢೀಕರಿಸಲಾಯಿತು. ಈ ಎಲ್ಲಾ ಯೋಜನೆಗಳ ಅನುಷ್ಠಾನದಲ್ಲಿ ನಾನು ಪ್ರಧಾನ ಪಾತ್ರ ವಹಿಸಿರುತ್ತೇನೆ. ವಿನಾಯಕ ಮಂದಿರದ ಭಕ್ತ ವೃಂದದೊಂದಿಗೆ ಆತ್ಮೀಯನಾಗಿದ್ದು, ಮಂದಿರಕ್ಕೆ ಬರುವ ಭಕ್ತರ ಸಂಖ್ಯೆ ಹೆಚ್ಚಿಸುವಲ್ಲಿ ಶ್ರಮಿಸಿರುತ್ತೇನೆ.

ಧಾರ್ಮಿಕ ಕ್ಷೇತ್ರದಲ್ಲಿ ಸಂಘಟನೆಯ ಅನುಭವವಿರುವ ನಾನು ಈ ಎಲ್ಲಾ ಕೆಲಸಗಳನ್ನು ಶ್ರದ್ಧೆ, ಭಕ್ತಿ, ಬದ್ಧತೆ ಮತ್ತು ಶುದ್ಧಾಂತಕರಣದಿಂದ ಮಾಡಿರುತ್ತೇನೆ.

ನಿಕಟಪೂರ್ವ ಚುನಾವಣೆಯಲ್ಲಿ ಪರಾಜಿತ ಖಜಾಂಚಿ ಅಭ್ಯರ್ಥಿಯಾದ ನಾನು ಮುಂಬರುವ ಬಂಟರ ಸಂಘದ ಆಡಳಿತ ಮಂಡಳಿಗೆ ನಡೆಯುವ ಚುನಾವಣೆಯಲ್ಲಿ "ಖಜಾಂಚಿ" ಸ್ಥಾನದ ಸೇವಾಕಾಂಕ್ಷಿಯಾಗಿದ್ದೇನೆ. ನಮ್ಮ ಸಮಾಜದ ಸೇವೆಗಾಗಿ ಸದಾ ಖಾತರಿಸುವ ನನಗೆ ತಾವೆಲ್ಲರೂ ಆಶೀರ್ವದಿಸಬೇಕಾಗಿ ಆತ್ಮೀಯತೆಯಿಂದ ಪ್ರಾರ್ಥಿಸುತ್ತಿದ್ದೇನೆ.

ಇಂತಿ ನಿಮ್ಮವ

**ಕೆ. ರತ್ನಾಕರ ಶೆಟ್ಟಿ,**

ಮಾಜಿ ಚೇರ್‌ಪರ್ಸನ್, ಪ್ರಾರ್ಥನಾ ಮಂದಿರ ಸಮಿತಿ

ಬಂಟರ ಸಂಘ ಬೆಂಗಳೂರು. ಮೊ: 9945712505

ADVT.

# A humorous incedent



B.A. Shetty

Way back in August 1951, I applied for a competitive exam conducted by the P&T dept. for the recruitment of the Junior Engineer in the telecom wing of the dept. The minimum qualification prescribed was a pass in the intermediate exam with Maths, Physics and Chemistry / Geography etc. By then I had completed my B.Sc degree exam with Maths, Physics and Chemistry and therefore I had attached the mark sheet of the B.Sc degree exam of Madras University.

The competitive exam was to be held on 26th and 27th Dec, 1951. But I did not receive my hall ticket even on 18th Dec 1951. One or two candidates who applied for the exam from Mangalore, had already received the hall tickets by around 15th December. I sent a telegram to one of my relatives studying in Presidency College to find out the fate of my application from the Office of P.M.G. at Madras. (At that time one Mr. K.N. Shetty was A.P.M.G in charge of the recruitment in the O/o P.M.G. Madras) My friend contacted him personally and it was found that I had not produced the intermediate pass certificate with Maths, Physics and Chemistry. The dealing Asst. had a check list with some Ten questions like i) whether the candidate had produced proof to show that he was born between 1st August 1926 and 31st July 1933, ii) whether the candidate had produced the certificate of passing the Intermediate exam with Maths, Physics and Chemistry / Geography etc. etc. Since I had not produced the intermediate pass certificate my application had been rejected.

The A.P.M.G. concerned, had issued the hall ticket and made over to my friend and he sent a telegram to me to reach Madras before 25.12.1951 I reached Madras on time and appeared for the exam at Vivekananda college centre, Madras. I passed the competitive exam with a fairly high rank and I underwent one year's training at the Telecom Training Centre Jubbal during 1952-1953.

## *Academic Excellence - Congratulations!*

**S.S.L.C / 10th Std. Achiever**



**Devicharan B. Shetty**
S/o K. Bhaskar Shetty & Ashwini B. Shetty
SSLC : 95.52%
Kannada -125
Poornaprgnya High School, Bangalore

# Every Life Matters…



Samanvitha Shetty

Mystery of living and history of life both are well expressed by everyone. When do you start your journey of life? Is it when you start earning or is it when you know what life is or is it when you enter into married life or is it when you find time to live your dreams? The options and questions are endless. That is because we always hear statements like "I want to live my life the way I want when I start earning", "I will live my life when I become independent", "I will live my life after I deliver all my responsibilities". All through these thoughts, we forget we are already living life and still think of planning when to "start living".

Life starts the day we are born and we are always dependent in one or the other way to someone or something. Our lives are filled with responsibilities whether we enjoy it or think it as a burden. Responsibility is not confined to adults. Kids are expected to be responsible, in their own way like being obedient, finishing homework, studying, playing safely, etc. These are minor for adults because as we grow, responsibility is weighed against money. What we learn as kids actually becomes part of our personality and what gets added is only what is noticed.

Childhood is the life of a child. Treating the kid with love, respecting their choices, allowing them to take decisions is what a parent or an adult can do. As parents we forget that a child is an individual. We always think the child is our responsibility and we are with the kid to protect them and ensure they have a safe and happy life. But that is not what we are for in their life. A child is also living its life which an adult forgets. Some point in life we would have heard our parents or elders saying: "what do you know about life?" or "You can do what you want when you start living on your own" and many such similar statements. But have you ever thought even though you are saying this to your kid, the kid's life and your life are two different lives? So everyone is living life.

I am irritated because my boss was not happy with my work. My child is upset because his teacher did not appreciate his project work. Both these scenarios have equal weightage because they occurred in two different lives. Negating the pain of a kid only because you as an adult don't feel the intensity, is not justified. Similarly, the kid also may not understand your pain and ignores any change going on around. But the stress in the environment of the house will tell him that something is wrong. If he doesn't realize and continues his fun behavior or starts crying for what happened in school, parents might end up scolding him or lose patience and say, "what's the big deal if teacher scolds. All that is part of life. When you grow up, you will realize what life is and what real problems are". When we say this or even think the pain of a kid is trivial compared to ours, does it mean life only starts when we are adults? Then why is it called the life of a child?

Stress, pressure, pain, anger all these are not age-specific emotions. Every individual experiences them based on what comes and

goes in their life and how they accept, reject, react or respond to situations. Treating your kid as an individual and not just as your possession helps them build their self image and self esteem. I heard someone saying, parenting is not a popularity contest. It is true but parenting is also not only showing love to your kid and trying to protect them from all sorts of problem which you consider as pain from your point of view. As adults we often see different view points with different individuals. If I think working from home is fun because I get to avoid traffic, save on my commute time and can sleep a little more, my colleague who stays just 5mins from office enjoys going to office and meeting everyone. So my fun is his problem and his enjoyment might not be fun to me. When adults don't look at life in the same way, why do we expect the kids' life to be the way we think it is. A kid has his point of view which sometimes surprises us and sometimes looks childish. Still, it is valid. There is no right or wrong in pain. If I am hurt, only I can feel the intensity. Don't ignore what your child shares. It is important to listen and reciprocate. If we don't teach them this at a young age, then we are not supposed to comment when they don't reciprocate it to us when we grow old. They are only showing the behavior which we taught them when we were adults. If adults think their problem is important and not the other person's, then kids see and learn the same and become the adults we showed them as role models.

Gratitude is not just an emotion. It is a way of life. When your kid brings shoes from the shoe rack and gives them to you to wear while you are stepping out, say "Thank You". If your kid gets water when you cough, say "Thank You". These are gestures which encourages positive behavior. There is nothing called as a big help or a small help. Everything a person does for you irrespective of their age should be positively acknowledged. Don't take anything or anyone in life for granted.

***We don't start living when we understand what life is.***

***We start living when we start valuing life. Be it ours or someone else's.***

## ಅಭಿನಂದನೆಗಳು



ನಮ್ಮ ಸಂಘದ ಸದಸ್ಯರಾದ ಶ್ರೀ ಚಂದ್ರಶೇಖರ ಶೆಟ್ಟಿಯವರು ಕೋವಿಡ್–19 ಪ್ರಾರಂಭದಿಂದ ಕಾಮಾಕ್ಷಿಪಾಳ್ಯ ಮತ್ತು ಸುತ್ತಮುತ್ತಲಿನ ಬಡಾವಣೆಗಳಲ್ಲಿ ಕರೋನ ವಾರಿಯರ್ಸ್ ಆಗಿ, ಕಾಮಾಕ್ಷಿಪಾಳ್ಯ ಪೋಲೀಸ್ ಠಾಣೆಯ ಬೀಟ್ ಮೆಂಬರ್ ಆಗಿ ಉತ್ತಮ ಸೇವೆ ಸಲ್ಲಿಸಿದ್ದಕ್ಕಾಗಿ ಬೆಂಗಳೂರು ಸಿಟಿ ಪೋಲೀಸ್ ಕಮಿಷನರ್ ಕಮಲ್‌ಪಂತ್‌ರವರು ಮತ್ತು ಕಾಮಾಕ್ಷಿಪಾಳ್ಯ ಪೋಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಶ್ರೀ ಪ್ರಶಾಂತ್ ಎಮ್. ರವರು ಸನ್ಮಾನಿಸಿದರು. ಇವರಿಗೆ ಬಂಟರ ಸಂಘದ ಪರವಾಗಿ ಅಭಿನಂದನೆಗಳು.

## ಅತ್ಯಂತ ಸರಳ ಜೀವಿ, ಚಿಂತಕ ಯುವ ಪೀಳಿಗೆಗೆ ಸ್ಫೂರ್ತಿ, ಪ್ರಬುದ್ಧ ನ್ಯಾಯಾಧೀಶ

# ಜಸ್ಟೀಸ್ ಪಿ. ವಿಶ್ವನಾಥ ಶೆಟ್ಟಿ


## ಗೌರವಾನ್ವಿತ ಕರ್ನಾಟಕ ಲೋಕಾಯುಕ್ತರು (ನಿವೃತ್ತ)



ಮುರಲೀಧರ ಹೆಗ್ಡೆ
ಮೊದಲ್ತಾವು

ಕಳೆದ ಜನವರಿ 27ರಂದು ಗೌರವಾನ್ವಿತ ಜಸ್ಟೀಸ್ ಪಿ. ವಿಶ್ವನಾಥ ಶೆಟ್ಟಿಯವರು ಕರ್ನಾಟಕ ಲೋಕಾಯುಕ್ತ ಹುದ್ದೆಯಲ್ಲಿ ಐದು ವರ್ಷಗಳ ಸೇವೆ ಸಲ್ಲಿಸಿ ನಿವೃತ್ತರಾದರು. “ಕರ್ನಾಟಕ ಲೋಕಾಯುಕ್ತ ಮುಖ್ಯಸ್ಥನಾಗಿ ನನ್ನ ಐದು ವರ್ಷಗಳ ಅವಧಿಯಲ್ಲಿ ಮಾಡಿದ ಕೆಲಸ ನನಗೆ ತೃಪ್ತಿ ತಂದಿದೆ” ಎಂಬ ಅವರ ಮಾತುಗಳು ನಮ್ಮೆಲ್ಲರಿಗೆ ಸ್ಫೂರ್ತಿ. ಲೋಕಾಯುಕ್ತ ಸಂಸ್ಥೆಗೆ ಇನ್ನೂ ಹೆಚ್ಚಿನ ಶಕ್ತಿ ಬರಲು ಶ್ರಮಿಸಿದವರು ಅವರು.

ಅವರ ಹಾದಿಯಲ್ಲಿ ಅನೇಕ ಅಡ್ಡಿಗಳು ಬಂದರೂ ಎದೆಗುಂದದೇ ತನ್ನ ಕೆಲಸಕಾರ್ಯಗಳನ್ನು ಮುಂದುವರಿಸಿದರು. ಇದು ಅವರ ಮೇಲೆ ನಡೆದ ಮಾರಣಾಂತಿಕ ಹಲ್ಲೆ, ಅಥವಾ ಕೋವಿಡ್ ಮಹಾಮಾರಿಯ ಪಾತ್ರವಾಗಿರಬಹುದು. ಇಂತಹ ಅನೇಕ ವಿಚಾರಗಳನ್ನು ತಮ್ಮ ಮುಂದೆ ಪ್ರಸ್ತುತ ಪಡಿಸುವ ಉದ್ದೇಶದಿಂದ ಗೌರವಾನ್ವಿತ ಜಸ್ಟೀಸ್ ಪಿ. ವಿಶ್ವನಾಥ ಶೆಟ್ಟಿಯವರ ಬಗ್ಗೆ ಈ ಲೇಖನ. ನಮ್ಮ ಬೆಂಗಳೂರು ಬಂಟರ ಸಂಘದ ಸರ್ವ ಸದಸ್ಯರ ಪರವಾಗಿ ನಾವು ಶ್ರೀಯುತರಿಗೆ ಅತ್ಯಂತ ನಮ್ರತೆಯಿಂದ ಗೌರವವನ್ನು ಈ ಮೂಲಕ ಸಲ್ಲಿಸುತ್ತಿದ್ದೇವೆ.




“I never dreamt of becoming the Lokayukta. I was happy to be an advocate in the Supreme Court, which fetched me higher remuneration. I was surprised to receive the message from the then Chief Minister through Advocate General to take up the new responsibilities as Karnataka Lokayukta. However, I must confess now, that I am satisfied with what I have done for the past five years. I have tried my best to strengthen the institution and its integrity despite the pandemic hurting our efforts. Corruption cannot be rooted out by the Lokayukta alone; the support of the Government, the public, judiciary and role of media is vital. I believe Lokayukta may come and go, but the institution should remain strong, to fight the growing corruption.”


**- Hon’ble Justice P. Vishwanath Shetty**

ದಿ. ಉಪ್ಪೂರು ಶ್ರೀ ಕೃಷ್ಣಯ್ಯ ಶೆಟ್ಟಿ ಮತ್ತು ದಿ. ಶ್ರೀಮತಿ ಪೆರೋಡಿ ಕಲ್ಯಾಣಿ ಶೆಡ್ತಿಯವರ ಮಗನಾಗಿ 1944ರಲ್ಲಿ ಜನಿಸಿದ ಶ್ರೀ ವಿಶ್ವನಾಥ ಶೆಟ್ಟಿಯವರ ವಿದ್ಯಾಭ್ಯಾಸ ಉಪ್ಪೂರು ಹಾಗೂ ಉಡುಪಿ ಬೋರ್ಡ್ ಹೈಸ್ಕೂಲ್‌ನಲ್ಲಿಯೂ, ನಂತರ ಉಡುಪಿ ಎಂ.ಜಿ.ಎಂ ಕಾಲೇಜಿನಲ್ಲಿ ಬಿ.ಎ. ಪದವಿ ಹಾಗೂ ಉಡುಪಿ ಲಾ ಕಾಲೇಜಿನಿಂದ ಎಲ್.ಎಲ್.ಬಿ. ಪದವಿ ಗಳಿಸಿದರು. ಬಾಲ್ಯದಿಂದಲೇ ನಾಯಕತ್ವ ಗುಣವನ್ನು ಹೊಂದಿದ್ದ ಇವರು ಹೈಸ್ಕೂಲ್‌ನಲ್ಲಿ ವಿದ್ಯಾರ್ಥಿ ನಾಯಕನಾಗಿಯೂ, ಎಂ.ಜಿ.ಎಂ. ಕಾಲೇಜಿನ ಸ್ಟೂಡೆಂಟ್ಸ್ ಯೂನಿಯನ್‌ನ ಕಾರ್ಯದರ್ಶಿಯೂ ಆಗಿದ್ದರು.

ಎನ್.ಸಿ.ಸಿ.ಯಲ್ಲಿ ಸಕ್ರಿಯರಾಗಿದ್ದ ಶ್ರೀಯುತ ವಿಶ್ವನಾಥ ಶೆಟ್ಟಿಯವರು ಎರಡು ವರ್ಷ ಜೂನಿಯರ್ ಡಿವಿಜನ್‌ನಲ್ಲಿ, ಐದು ವರ್ಷ ಸೀನಿಯರ್ ಡಿವಿಜನ್‌ನಲ್ಲಿದ್ದರು. ಎನ್.ಸಿ.ಸಿ. ಯ Company Sergeant major ಆಗಿದ್ದರು. ರಾಜ್ಯದಿಂದ ಎನ್.ಸಿ.ಸಿ. ಯಲ್ಲಿನ ಅಡ್ವಾನ್ಸ್ಡ್ ಲೀಡರ್‌ಶಿಪ್ ಕ್ಯಾಂಪ್, ಉತ್ತರಾಖಂಡ್‌ನಲ್ಲಿ ಭಾಗವಹಿಸಿದ್ದರು.







### ವೃತ್ತಿ ಜೀವನ ಪ್ರಾರಂಭ

ಕರ್ನಾಟಕ ಹೈಕೋರ್ಟ್‌ನ ಅಡ್ವೋಕೇಟ್ ಜನರಲ್ ಶ್ರೀ ತುಂಬೆ ಕೃಷ್ಣರಾವ್‌ರವರ ಚೇಂಬರ್‌ನಲ್ಲಿ 1965ರಲ್ಲಿ ವೃತ್ತಿ ಜೀವನ ಪ್ರಾರಂಭಿಸಿದ ಇವರು ಅಡ್ವೋಕೇಟ್ ಆಗಿ 1971ರವರೆಗೆ ಕೆಲಸ ಮಾಡಿದರು. 1971ರಿಂದ ಸ್ವತಂತ್ರವಾಗಿ ಪ್ರಾಕ್ಟೀಸ್ ಪ್ರಾರಂಭಿಸಿ, ಶೆಟ್ಟಿ & ಹೆಗ್ಡೆ ಅಸೋಸಿಯೇಟ್ಸ್ ಎಂಬ ಸಂಸ್ಥೆ ಪ್ರಾರಂಭಿಸಿ, ಅನೇಕ ಕ್ರಿಮಿನಲ್, ಸಿವಿಲ್, ಸೇವೆ, ಶೈಕ್ಷಣಿಕ ಹಾಗೂ ಸಾಂವಿಧಾನಿಕ ಕಾನೂನುಗಳಲ್ಲಿ ಅನೇಕ ಕೆಲಸಗಳನ್ನು ಮಾಡಿ, ಸುಮಾರು 19–20 ಜನರೊಡನೆ ಕೆಲಸ ಮಾಡುತ್ತಿದ್ದರು. ಸರ್ಕಾರಿ ಲಾ ಕಾಲೇಜು (ಈಗಿನ ಯೂನಿರ್ವಸಿಟಿ ಲಾ ಕಾಲೇಜು) ಬೆಂಗಳೂರು ಇದರಲ್ಲಿ ಸುಮಾರು 7 ವರ್ಷಗಳ ಕಾಲ ಅತಿಥಿ ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು. ಸತತ ನಾಲ್ಕು ಬಾರಿ ಕರ್ನಾಟಕ ರಾಜ್ಯ ಬಾರ್ ಕೌನ್ಸಿಲ್‌ಗೆ ಸದಸ್ಯರಾಗಿ ಆಯ್ಕೆಯಾಗಿದ್ದರು.

1982ರಲ್ಲಿ ಬಾರ್ ಕೌನ್ಸಿಲ್ ಆಫ್ ಇಂಡಿಯಾದಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ, 1989ರವರೆಗೂ ಈ ಸ್ಥಾನದಲ್ಲಿ ಮುಂದುವರಿದರು. 1981-91ರಲ್ಲಿ ಕರ್ನಾಟಕ ಬಾರ್ ಕೌನ್ಸಿಲ್‌ನ ಅಧ್ಯಕ್ಷರಾಗಿ ಅನೇಕ ಶೈಕ್ಷಣಿಕ ಕಾನೂನು ಕಾರ್ಯಕ್ರಮಗಳನ್ನು ಆಯೋಜಿಸಿದರು. ಅಲ್ಲದೇ ಬಾರ್ ಕೌನ್ಸಿಲ್ ಆಫ್ ಇಂಡಿಯಾದ ಸದಸ್ಯರಾಗಿ ಕಾನೂನು ಶಿಕ್ಷಣ ತರಬೇತಿ ಕಾರ್ಯಾಗಾರಗಳನ್ನು ನಡೆಸಿ ಕಿರಿಯ ವಕೀಲರುಗಳಿಗೆ ದೇಶದ ಅತ್ಯುತ್ತಮ ವಕೀಲರುಗಳಿಂದ ತರಬೇತಿ ಕೊಡಿಸುವಲ್ಲಿ ಯಶಸ್ವಿಯಾದರು.

ಎಕಾಡೆಮಿಕ್ ಕೌನ್ಸಿಲ್, ಎಕ್ಸಿಕ್ಯುಟಿವ್ ಕೌನ್ಸಿಲ್ ಹಾಗೂ ನ್ಯಾಶನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿಯ ಜನರಲ್ ಕೌನ್ಸಿಲ್‌ನ ಸದಸ್ಯರಾಗಿ ಬೆಂಗಳೂರಿನಲ್ಲಿ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿಯ ಸ್ಥಾಪನೆಗಾಗಿ ದುಡಿದರು. ಕರ್ನಾಟಕ ಲಾ ರಿಪೋರ್ಟಿಂಗ್ ಕೌನ್ಸಿಲ್‌ನ ಸದಸ್ಯರಾಗಿ, ಬಾರ್ ಕೌನ್ಸಿಲ್ ಆಫ್ ಇಂಡಿಯಾದ ನಾಮಿನಿಯಾಗಿ ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾದ ಸದಸ್ಯರಾಗಿ ಕೆಲಸ ಮಾಡಿದರಲ್ಲದೇ ಹಲವು ಬಾರಿ ಮೇಲಿನ ಜವಾಬ್ದಾರಿಗಳಿಗೆ ಮರು ಆಯ್ಕೆಗೊಂಡಿದ್ದರು.



ಕರ್ನಾಟಕ ಹೈಕೋರ್ಟ್‌ನ ನ್ಯಾಯಾಧೀಶರಾಗಿ 1995ರಲ್ಲಿ ಆಯ್ಕೆಯಾಗುವವರೆಗೂ ಇಂತಹ ಅನೇಕ ಹುದ್ದೆಗಳನ್ನು ನಿಭಾಯಿಸಿ, ಕರ್ನಾಟಕ ಹೈಕೋರ್ಟ್‌ನ ಸೀನಿಯರ್ ಅಡ್ವೊಕೇಟ್ ಕೂಡಾ ಆಗಿದ್ದರು. ನ್ಯೂಜಿಲ್ಯಾಂಡ್‌ನಲ್ಲಿ ನಡೆದ ಕಾಮನ್‌ವೆಲ್ತ್ ಲಾಯರ್ಸ್ ಕಾನ್ಫರೆನ್ಸ್‌ನಲ್ಲಿ ಭಾಗಿಯಾಗಿದ್ದರು.



**ಕರ್ನಾಟಕ ಉಚ್ಛ ನ್ಯಾಯಾಲಯದ ನ್ಯಾಯಾಧೀಶರಾಗಿ**

1995ರಲ್ಲಿ ಶ್ರೀಯುತ ಪಿ. ವಿಶ್ವನಾಥ ಶೆಟ್ಟಿಯವರು ಕರ್ನಾಟಕ ಹೈಕೋರ್ಟ್‌ನ ನ್ಯಾಯಾಧೀಶರಾಗಿ ನೇಮಕಗೊಂಡು 2006ರವರೆಗೆ ಸೇವೆ ಸಲ್ಲಿಸಿದರು. ಕರ್ನಾಟಕ ಜ್ಯುಡಿಷಿಯಲ್ ಅಕಾಡೆಮಿಯ ಸ್ಥಾಪಕ ಅಧ್ಯಕ್ಷರಾಗಿ ಕರ್ನಾಟಕ ಹೈಕೋರ್ಟ್‌ನ ಮುಖ್ಯ




ನ್ಯಾಯಾಧೀಶರು ಇವರನ್ನು ನೇಮಕ ಮಾಡಿದರು. ಮುಂದೆ ಇದು ದೇಶದ ಅತ್ಯುತ್ತಮ ತರಬೇತು ಕೇಂದ್ರವಾಗಿ ಪರಿಗಣಿಸಲ್ಪಟ್ಟಿತ್ತು. 1999ರಲ್ಲಿ ಇಂಗ್ಲೆಂಡ್‌ನ ಕ್ರಿಮಿನಲ್ ಜಸ್ಟೀಸ್ ಸಿಸ್ಟಮ್‌ನ ಬಗ್ಗೆ ಅಧ್ಯಯನ ಮಾಡಲು ಬ್ರಿಟಿಷ್ ಹೈಕಮಿಷನ್ ಇವರನ್ನು ಆಹ್ವಾನಿಸಿತು. ಅಲ್ಲಿ ಅನೇಕ ನ್ಯಾಯಾಲಯಗಳನ್ನು, ಸೆರೆಮನೆಗಳನ್ನು, ವಿಶ್ವವಿದ್ಯಾಲಯಗಳನ್ನು ಭೇಟಿ ಮಾಡಿ ಭಾರತದ ನ್ಯಾಯಂಗ ವ್ಯವಸ್ಥೆಯ ಬಗ್ಗೆ ಪ್ರಬಂಧಗಳನ್ನು ಮಂಡಿಸಿದರು.



ಹೈಕೋರ್ಟ್ ಲೀಗಲ್ ಸರ್ವಿಸಸ್ ಕಮಿಟಿಯ ಅಧ್ಯಕ್ಷರಾಗಿ 2002ರಿಂದ 2004ರವೆಗೂ, ಎಕ್ಸಿಕ್ಯುಟಿವ್ ಚೇರ್‌ಮೆನ್, ಕರ್ನಾಟಕ ರಾಜ್ಯ ಲೀಗಲ್ ಸರ್ವಿಸಸ್ ಅಥಾರಿಟಿ ಆಗಿ 2006ರವೆಗೂ ಕೆಲಸ ಮಾಡಿದರು. ಈ ಅವಧಿಯಲ್ಲಿ ಹಲವಾರು ಕಾನೂನು ಕಲಿಕೆ ಕಾರ್ಯಕ್ರಮಗಳನ್ನು ಸಾಮಾನ್ಯ ಜನರಿಗೆ, ಶಾಲಾ ಉಪಾಧ್ಯಾಯರುಗಳಿಗೆ, ಮಹಿಳಾ ಸಹಕಾರಿ ಸಂಘಗಳಿಗೆ, ಸ್ವಸಹಾಯ ತಂಡಗಳಿಗೆ ಹಾಗೂ ಸಮಾಜದ ಇತರ ವರ್ಗಗಳಿಗೆ ಅನುಕೂಲವಾಗುವಂತೆ ಆಯೋಜಿಸಿದರು. ಇದು ಇಡೀ ದೇಶಕ್ಕೆ ಮಾದರಿಯಾಗಿತ್ತು.

ಈ ಅವಧಿಯುಲ್ಲಿಯೇ ಇನ್ನೆರಡು ಪ್ರಮುಖ ಕಾರ್ಯಕ್ರಮಗಳಾದ SAPLING (A student advocacy programme linking institutions of learning) ಹಾಗೂ ಪ್ರಾಜೆಕ್ಟ್ COMBAT ಗಳನ್ನು ಆರಂಭಿಸಿದರು. Student Legal Aid and literacy club ಗಳನ್ನು ಸ್ಥಾಪಿಸಿ, ಇದನ್ನು ಭಾರತದ ರಾಷ್ಟ್ರಪತಿಗಳಾದ ಸನ್ಮಾನ್ಯ ಎ.ಪಿ.ಜೆ ಅಬ್ದುಲ್ ಕಲಾಂರವರು ಉದ್ಘಾಟಿಸಿದ್ದರು.

## ನಿವೃತ್ತಿ ನಂತರ

2006ರಲ್ಲಿ ಕರ್ನಾಟಕ ಹೈಕೋರ್ಟ್‌ನಿಂದ ನ್ಯಾಯಧೀಶರಾಗಿ ನಿವೃತ್ತಿಯಾದ ನಂತರ ಸುಪ್ರೀಂ ಕೋರ್ಟ್‌ನಲ್ಲಿ ವಕೀಲ ವೃತ್ತಿ ಮುಂದುವರಿಸಿದರು. ಹಲವಾರು ಉಚ್ಚನ್ಯಾಯಾಲಯಗಳಲ್ಲಿಯೂ ವಕೀಲರಾಗಿ ವಾದಿಸುತ್ತಿದ್ದರು. ಈ ಸಮಯದಲ್ಲಿ ಕರ್ನಾಟಕ, ತೆಲಂಗಾಣ, ಪಾಂಡಿಚೇರಿ ಹಾಗೂ ಆಂಧ್ರಪ್ರದೇಶ ಸರ್ಕಾರಗಳ ಪರವಾಗಿಯೂ ವಾದಿಸಿದ್ದರು. ಛತ್ತೀಸ್‌ಗಡದಲ್ಲಿ ನಡೆದ ಗಣಿ ಅಪಘಾತದಲ್ಲಿ 13 ಜನರ ಸಾವು ಹಾಗೂ ಅನೇಕ ಜನರು ಗಂಭೀರವಾಗಿ ಗಾಯಗೊಂಡಾಗ ಭಾರತ ಸರಕಾರ ಇವರನ್ನು ಏಕ ಸದಸ್ಯ ಆಯುಕ್ತರಾಗಿ ನೇಮಿಸಿ, ವಿಚಾರಣೆ ನಡೆಸಲಾಯಿತು. ಇವರು ಸಲ್ಲಿಸಿದ ವರದಿಯನ್ನು ಸ್ವೀಕಾರ ಮಾಡಲಾಗಿ, ಸಂಬಂಧಪಟ್ಟ ಅಧಿಕಾರಿಗಳಿಂದ ಅನುಷ್ಠಾನಗೊಳಿಸಲಾಯಿತು.

ನ್ಯಾಷನಲ್ ಲೀಗಲ್ ಸರ್ವಿಸ್ ಅಥಾರಿಟಿಯ ಸದಸ್ಯರಾಗಿ 2016ರಲ್ಲಿ ಭಾರತದ ಗೌರವಾನ್ವಿತ ಮುಖ್ಯ-ನ್ಯಾಯಾಧೀಶರಾದ ಜಸ್ಟೀಸ್ ಜೆ.ಎಸ್. ಠಾಕುರ್‌ರವರು ಇವರನ್ನು ನೇಮಿಸಿದರು. ಅಮೇರಿಕಾ, ಇಂಗ್ಲೆಂಡ್, ನ್ಯೂನಿಲ್ಯಾಂಡ್, ಆಸ್ಟ್ರೇಲಿಯಾ, ಸಿಂಗಾಪುರ, ಮಲೇಶಿಯಾ, ಸ್ವಿಜರ್‌ಲ್ಯಾಂಡ್, ಫ್ರಾನ್ಸ್ ಮುಂತಾದ ದೇಶಗಳಿಗೆ ಭೇಟಿ ನೀಡಿ ಅಲ್ಲಿನ ಅನೇಕ ನ್ಯಾಯಾಲಯಗಳಿಗೂ ಭೇಟಿ ನೀಡಿದ್ದರು.

## ಕರ್ನಾಟಕ ಲೋಕಾಯುಕ್ತರಾಗಿ ನೇಮಕ

ಸನ್ಮಾನ್ಯ ಜಸ್ಟೀಸ್ ಪಿ. ವಿಶ್ವನಾಥ ಶೆಟ್ಟಿಯವರನ್ನು 2017 ಜನವರಿಯಲ್ಲಿ ಕರ್ನಾಟಕ ಲೋಕಾಯುಕ್ತರನ್ನಾಗಿ ಕರ್ನಾಟಕ ಸರ್ಕಾರ ನೇಮಿಸಿತು. ಸಾಂವಿಧಾನಿಕ ಅಧಿಕಾರವುಳ್ಳ ಆರು ಸಂಸ್ಥೆಗಳಾದ ಮುಖ್ಯಮಂತ್ರಿ ಸಚಿವಾಲಯ, ಕರ್ನಾಟಕ ವಿಧಾನ ಪರಿಷತ್, ವಿಧಾನಸಭೆ ಸಭಾಪತಿಗಳು, ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಹಾಗೂ ಪ್ರತಿಪಕ್ಷ ನಾಯಕರುಗಳೆಲ್ಲಾ ಸೇರಿ ಸರ್ವಾನುಮತದಿಂದ ಇವರನ್ನು ಅವಿರೋಧ ಆಯ್ಕೆ ಮಾಡಿರುವುದು ಇವರ ಅಪಾರ ಕಾನೂನು ಪರಿಣತಿಗೆ ಹಿಡಿದ ಕೈಗನ್ನಡಿ.



ಗೌರವಾನ್ವಿತ ಲೋಕಾಯುಕ್ತರಾಗಿ ಅಧಿಕಾರ ವಹಿಸಿಕೊಂಡಾಗ ಈ ಸಂಸ್ಥೆಯಲ್ಲಿ ಒಟ್ಟು 7680 ದೂರು ಪ್ರಕರಣಗಳು ತನಿಖೆಗೆ ಹಾಗೂ 3242 ಪ್ರಕರಣಗಳು ವಿಚಾರಣೆಗೆ ಬಾಕಿ ಇದ್ದವು. ಅದರಲ್ಲಿ ಕೆಲವೊಂದು ಪ್ರಕರಣಗಳು 15 ವರ್ಷಗಳಿಗಿಂತಲೂ ಹೆಚ್ಚು ಕಾಲದಿಂದ ಇದ್ದ ದೂರು ಹಾಗೂ ವಿಚಾರಣಾ ಪ್ರಕರಣಗಳಾಗಿದ್ದರಿಂದ ಈ ಅಂಶವನ್ನು ಗಂಭೀರವಾಗಿ ಪರಿಗಣಿಸಿ, ಸಂಸ್ಥೆಯ ವಿಚಾರಣಾ ಅಧಿಕಾರಿಗಳ ಸಂಖ್ಯೆಯನ್ನು ಹೆಚ್ಚಿಸಲು ತಕ್ಷಣ ಕ್ರಮ ಕೈಗೊಂಡರು. ಇದಕ್ಕೆ ಪೂರಕವಾಗಿ ಒಂದು ಮಹಡಿಯ ಹೆಚ್ಚಿನ ಸ್ಥಳಾವಕಾಶವನ್ನು ಪಡೆಯಲಾಯಿತು. ಈ ಎಲ್ಲಾ ಕ್ರಮಗಳಿಂದಾಗಿ ಈವರೆಗೆ ಒಟ್ಟು 20,199 ದೂರು ಪ್ರಕರಣಗಳು ಹಾಗೂ 2677 ವಿಚಾರಣಾ ಪ್ರಕರಣಗಳನ್ನು ಇತ್ಯರ್ಥ ಪಡಿಸಲಾಯಿತು. ಇದಲ್ಲದೇ ಕಳೆದ ಐದು ವರ್ಷಗಳಿಂದ ಸುಮಾರು 13000 ಮಿಸಲೇನಿಯಸ್ ದೂರು ಪ್ರಕರಣಗಳು ದಾಖಲಾಗಿದ್ದು, ಅವುಗಳಲ್ಲಿ ಸುಮಾರು 12000 ಪ್ರಕರಣಗಳು ಇತ್ಯರ್ಥವಾಗಿದೆ. 300ಕ್ಕೂ ಅಧಿಕ ಸ್ವಯಂ ಪ್ರೇರಿತ ಪ್ರಕರಣಗಳ ದಾಖಲು ಮತ್ತು ಸಾರ್ವಜನಿಕ ಕುಂದು ಕೊರತೆಗಳ ನಿವಾರಣೆ ಮಾಡಲಾಗಿದೆ. ಇದರಿಂದಾಗಿ ಹುತಾತ್ಮರಾದ ಸೈನಿಕರ ವಾರಸುದಾರರಿಗೆ, ಗಾಯಗೊಂಡ ಸೈನಿಕರಿಗೆ ನಿಯಮಗಳ ಪ್ರಕಾರ ನಿವೇಶನ ಅಥವಾ ಜಮೀನು ಹಂಚಿಕೆ ತ್ವರಿತಗೊಳಿಸಲಾಯಿತು. ಇದರ ಬಗ್ಗೆ ಹಲವಾರು ಜಿಲ್ಲಾ ವರದಿಗಳನ್ನು ಸ್ವೀಕರಿಸಲಾಗಿತ್ತು. ಶಿಥಿಲಾವಸ್ಥೆಯಲ್ಲಿದ್ದ ಶಾಲಾ ಕಟ್ಟಡಗಳ ದುರಸ್ತಿ, ಮೂಲಭೂತ ಸೌಕರ್ಯ, ಪ್ರಾಥಮಿಕ ಸಮುದಾಯ ಆರೋಗ್ಯ ಕೇಂದ್ರ, ತಾಲೂಕು ಆರೋಗ್ಯ ಕೇಂದ್ರಗಳಲ್ಲಿ ಮೂಲಭೂತ ಸೌಕರ್ಯ, ಖಾಲಿ ಇರುವ ವೈದ್ಯಾಧಿಕಾರಿ ಹಾಗೂ ಇತರ ಸಿಬ್ಬಂದಿಗಳ ನೇಮಕಾತಿಗೆ ಶಿಫಾರಸ್ಸು, ರಾಜ್ಯದಾದ್ಯಂತ ಸರ್ಕಾರದ ಸಂಸ್ಥೆಗಳಿಗೆ ಹೊರಗುತ್ತಿಗೆ ಆಧಾರದಲ್ಲಿರುವ ನೌಕರಿಗೆ ಕನಿಷ್ಠ ವೇತನ, ಇ.ಎಸ್.ಐ, ಇ.ಪಿ.ಎಫ್‌ಗಳ ಸೌಲಭ್ಯಗಳಿಗೆ ಶಿಫಾರಸ್ಸು, ಪೌರ ಕಾರ್ಮಿಕರಿಗೆ ಸುರಕ್ಷಣಾ ಉಪಕರಣಗಳನ್ನು ಒದಗಿಸಲು ಶಿಫಾರಸ್ಸು, 2015ನೇ ಇಸವಿಯಿಂದ ರಾಜಾದ್ಯಂತ ಕಾಣೆಯಾದ ಮಕ್ಕಳ ಪತ್ತೆ ಹಾಗೂ ಅವರ ಪುನರ್ ವಸತಿಗಾಗಿ ಕ್ರಮ–ಹೀಗೆ ಹಲವಾರು ಪ್ರಗತಿ ಸಾಧಿಸಲಾಗಿದೆ.

